ವಿಜಯ ಕರ್ನಾಟಕ

ಭಾನುವಾರ,1 ಮೇ 2022,
ಮಂಗಳೂರು

# ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರ ಉದ್ಘಾಟನೆ

## ಉಚಿತ ವಸತಿ, ಪೌಷ್ಟಿಕ ಆಹಾರ, ಸಮಾಲೋಚನೆ, ಶೈಕ್ಷಣಿಕ ಸಹಾಯ ಸೇವೆ



■ ವಿಕ ಸುದ್ದಿಲೋಕ ಉಡುಪಿ

ಮಣಿಪಾಲ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಕಸ್ತೂರ್ಬಾ ಆಸ್ಪತ್ರೆ, ಮಾಹೆ ಮಣಿಪಾಲದ ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕೋಲಜಿ ವಿಭಾಗದ ಸಹಯೋಗದೊಂದಿಗೆ ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರ(ಕ್ಯಾನ್ಸರ್ ಬಾಧಿತ ಮಕ್ಕಳು ಮತ್ತು ಅವರ ಆರೈಕೆದಾರರಿಗಾಗಿ ಹೋಂ ಅವೇ ಫ್ರಮ್ ಹೋಂ) ಶನಿವಾರ ಉದ್ಘಾಟನೆಗೊಂಡಿತು.

ಇದು ಕ್ಯಾನ್ಸರ್ ಬಾಧಿತ ಮಕ್ಕಳಿಗೆ ಮತ್ತು ಅವರ ಆರೈಕೆ ಮಾಡುವವರಿಗೆ ಉಚಿತವಾಗಿ ವಸತಿ, ಪೌಷ್ಟಿಕ ಆಹಾರ, ಸಮಾಲೋಚನೆ ಮತ್ತು ಶೈಕ್ಷಣಿಕ ಸಹಾಯ ಸೇವೆ ಒದಗಿಸುತ್ತದೆ. ಇದು ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಮಾಹೆ ಮಣಿಪಾಲ ಮತ್ತು ಆಕ್ಸೆಸ್‌ಲೈಫ್‌ನ ಜಂಟಿ ಯೋಜನೆಯಾಗಿದೆ.

ಮಣಿಪಾಲ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ ಮುಖ್ಯಸ್ಥ ಡಾ. ರಂಜನ್ ಆರ್. ಪೈ ಕೇಂದ್ರವನ್ನು ಉದ್ಘಾಟಿಸಿದರು. ಆಕ್ಸೆಸ್‌ಲೈಫ್ ಸಂಸ್ಥಾಪಕ ಮತ್ತು ಮುಖ್ಯಸ್ಥ ಗಿರೀಶ್ ನಾಯರ್, ಸಹ-ಸಂಸ್ಥಾಪಕ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ಅಂಕೀತ್ ದೇವ್, ಮಾಹೆ ಮಣಿಪಾಲದ ಉಪಕುಲಪತಿ ಲೆಫ್ಟಿನೆಂಟ್ ಜನರಲ್ ಡಾ. ಎಂ.ಡಿ. ವೆಂಕಟೇಶ್ ಗೌರವ ಅತಿಥಿಗಳಾಗಿದ್ದರು.

ಮಾಹೆ ಮಣಿಪಾಲ ಸಹ ಕುಲಾಧಿಪತಿ ಡಾ. ಎಚ್. ಎಸ್. ಬಲ್ಲಾಳ್ ಅಧ್ಯಕ್ಷತೆ ವಹಿಸಿದ್ದರು. ಆಕ್ಸೆಸ್ ಲೈಫ್ ಮಾಹೆ ಮಣಿಪಾಲ ಕೇಂದ್ರವು ಎನರ್ಜಿ ಸೆಲ್ ಎದುರು, ಬಿಕ್ಕೊ ರಸ್ತೆ ಬಳಿ, ಮಾಧವನಗರ ಮಣಿಪಾಲದಲ್ಲಿ ಕಾರ್ಯಾಚರಿಸಲಿದೆ.

ಆಕ್ಸೆಸ್‌ಲೈಫ್ ಅಸಿಸ್ಟೆನ್ಸ್ ಫೌಂಡೇಶನ್ ಭಾರತದ ಲಾಭರಹಿತ(ಎನ್‌ಜಿಒ) ನೋಂದಾಯಿತ ಸಂಸ್ಥೆಯಾಗಿದ್ದು, ಮಗುವಿನ ಕ್ಯಾನ್ಸರ್ ಚಿಕಿತ್ಸೆಗಾಗಿ ಕ್ಯಾನ್ಸರ್ ಕೇಂದ್ರಕ್ಕೆ ಬರುವ ಕುಟುಂಬಗಳಿಗೆ ಬಹುಸೌಲಭ್ಯ ಮತ್ತು ಬೆಂಬಲದ ಆರೈಕೆ ಒದಗಿಸುತ್ತದೆ. 3ರಿಂದ 6 ತಿಂಗಳ ಅವಧಿಯವರೆಗೆ ಮತ್ತು ಕೆಲವೊಮ್ಮೆ ಒಂದು ವರ್ಷದ ಅವಧಿಯ ಚಿಕಿತ್ಸೆಯ ಸಂಪೂರ್ಣ ಅವಧಿಯಲ್ಲಿ ಮಕ್ಕಳು ಮತ್ತು ಅವರ ಪೋಷಕರಿಗೆ ವಸತಿ, ನೈರ್ಮಲ್ಯದ ವಾತಾವರಣ, ಪೌಷ್ಟಿಕಾಂಶವುಳ್ಳ ಊಟ, ಸಮಾಲೋಚನೆ, ಮನರಂಜನಾ ಮತ್ತು ಶೈಕ್ಷಣಿಕ ಸಹಾಯ ಸೌಲಭ್ಯ ಒದಗಿಸುತ್ತದೆ.

ಆಕ್ಸೆಸ್‌ಲೈಫ್‌ನ ಸಹ ಸಂಸ್ಥಾಪಕ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ಅಂಕಿತ್ ದೇವ್ ಮಾತನಾಡಿದರು.

ಮಾಹೆ ಸಹ ಕುಲಾಧಿಪತಿ ಡಾ. ಎಚ್.ಎಸ್. ಬಲ್ಲಾಳ್ ಮಾತನಾಡಿ, ಬಾಲ್ಯದ ಕ್ಯಾನ್ಸರ್ ಗುಣಪಡಿಸಬಹುದಾಗಿದೆ. ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರವು ಈ ಸೌಲಭ್ಯ ಒದಗಿಸುವ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿಂದ ಆರೈಕೆ ಮಾಡುವವರು ಚಿಕಿತ್ಸೆಯನ್ನು ತ್ಯಜಿಸುವುದು. ನಿರಾಕರಿಸುವವರ ಮನ ಪರಿವರ್ತನೆ ಗುರಿ ಹೊಂದಿದೆ. ಇದರೊಂದಿಗೆ ಆಸ್ಪತ್ರೆಯು ಈ ಮಕ್ಕಳಿಗೆ ವಿವಿಧ ನಿಧಿಗಳು ಮತ್ತು ಯೋಜನೆಗಳ ಮೂಲಕ ಚಿಕಿತ್ಸೆಗೆ ಸಹಾಯ ಮಾಡುವುದನ್ನು ಮುಂದುವರಿಸಲಿದೆ. ಈ ಎಲ್ಲ ಸೌಲಭ್ಯಗಳು ರೋಗಿಗೆ ಯಾವುದೇ ಹೆಚ್ಚುವರಿ ವೆಚ್ಚವಿಲ್ಲದೆ ಸಿಗಲಿದೆ. ಕೇಂದ್ರದ ಕಾರ್ಯಾಚರಣೆಯ ವೆಚ್ಚದ ಹೆಚ್ಚುಭಾಗ ಆಕ್ಸೆಸ್‌ಲೈಫ್ ಅಸಿಸ್ಟೆನ್ಸ್ ಫೌಂಡೇಶನ್ ಭರಿಸಲಿದೆ ಎಂದರು.

1-5-2022
UDAYAVANI - MANIPAL

# ಆಕ್ಸೆಸ್ ಲೈಫ್ ಮಾಹೆ ಮಣಿಪಾಲ ಕೇಂದ್ರ ಉದ್ಘಾಟನೆ




ಆಕ್ಸೆಸ್ ಲೈಫ್ ಮಾಹೆ ಮಣಿಪಾಲ ಕೇಂದ್ರ (ಹೋಂ ಅವೇ ಫ್ರಮ್ ಹೋಂ) ಉದ್ಘಾಟನೆ ನಡೆಯಿತು.

ಮಣಿಪಾಲ, ಎ. 30: ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಮಾಹೆ ಮಣಿಪಾಲದ ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕೋಲಜಿ ವಿಭಾಗದ ಸಹಯೋಗದೊಂದಿಗೆ ಆಕ್ಸೆಸ್ ಲೈಫ್ ಮಾಹೆ ಮಣಿಪಾಲ ಕೇಂದ್ರದ (ಕ್ಯಾನ್ಸರ್ ಪೀಡಿತ ಮಕ್ಕಳು ಮತ್ತು ಅವರ ಆರೈಕೆದಾರರಿಗೆ ಹೋಂ ಅವೇ ಫ್ರಂ ಹೋಂ) ಉದ್ಘಾಟನೆಯನ್ನು ಮಣಿಪಾಲ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ ಮುಖ್ಯಸ್ಥ ಡಾ| ರಂಜನ್ ಆರ್. ಪೈ ಶನಿವಾರ ನೆರವೇರಿಸಿದರು.

ಮಣಿಪಾಲದ ಈ ಕೇಂದ್ರವು ಕ್ಯಾನ್ಸರ್ ಪೀಡಿತ ಮಕ್ಕಳು ಮತ್ತು ಅವರ ಆರೈಕೆದಾರರಿಗಾಗಿ ರಾಜ್ಯದ ಮೊದಲ ಹೋಂ ಅವೇ ಫ್ರಂ ಹೋಂ ಪರಿಕಲ್ಪನೆಯಾಗಿದೆ. ಈ ಪ್ರದೇಶದ ಬಹಳಷ್ಟು ಸ್ವಯಂಸೇವಕರಿಗೆ ಈ ಸೇವೆಯಲ್ಲಿ ತಾವು ತೊಡಗಿಸಿಕೊಳ್ಳಲು ಕೇಂದ್ರವು ದಾರಿ ಮಾಡಿಕೊಡಲಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮಾಹೆ ವಿ.ವಿ. ಸಹಕುಲಾಧಿಪತಿ ಡಾ| ಎಚ್.ಎಸ್. ಬಲ್ಲಾಳ್ ಮಾತನಾಡಿ, ಆಕ್ಸೆಸ್ ಲೈಫ್ ಮಾಹೆ ಮಣಿಪಾಲ ಕೇಂದ್ರವು ಈ ಸೌಲಭ್ಯಗಳನ್ನು ಒದಗಿಸುವ ಮೂಲಕ ಆರ್ಥಿಕ, ಸಾಮಾಜಿಕ ಕಾರಣಗಳಿಂದ ಆರೈಕೆ ಮಾಡುವವರು ಚಿಕಿತ್ಸೆಯನ್ನು ತ್ಯಜಿಸುವುದು, ನಿರಾಕರಿಸುವವರ ಮನಃಪರಿವರ್ತನೆಯ ಗುರಿ ಹೊಂದಿದೆ ಎಂದರು.

ಆಕ್ಸೆಸ್ ಲೈಫ್‌ನ ಸಹಸಂಸ್ಥಾಪಕ, ಸಿಇಒ ಅಂಕಿತ್ ದೇವ್ ಅವರು, ಕೇಂದ್ರದ ಮೂಲಕ ಎಲ್ಲ ಚಿಕಿತ್ಸೆ ನೀಡುವ ವೈದ್ಯರು, ಅರೆವೈದ್ಯಕೀಯ ತಂಡ ಮತ್ತು ಕುಟುಂಬಗಳನ್ನು ಬೆಂಬಲಿಸಲು ಸಾಧ್ಯವಾಗುವುದಲ್ಲದೆ, ರಾಜ್ಯದಲ್ಲಿ ಮಣಿಪಾಲದಲ್ಲಿ ನಮ್ಮ ವಿಸ್ತರಣೆಯು ಬಾಲ್ಯದ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲು ಅನುವು ಮಾಡಿಕೊಡುತ್ತದೆ ಎಂದರು.

ಆಸ್ಪತ್ರೆಯ ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕೋಲಜಿ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳಲ್ಲಿ 2/3ಕ್ಕಿಂತ ಹೆಚ್ಚು ಮಕ್ಕಳು ರಾಜ್ಯದ ಗ್ರಾಮೀಣ ಪ್ರದೇಶದಿಂದ ಬರುತ್ತಿದ್ದಾರೆ.

ಕೇಂದ್ರಕ್ಕಾಗಿ ಮಾಹೆಯು ಆಸ್ಪತ್ರೆಯ ಸಮೀಪದಲ್ಲಿ 2 ವಸತಿ ಗೃಹಗಳನ್ನು ಒದಗಿಸಿದೆ ಎಂದು ಮಾಹೆ ವಿ.ವಿ. ಕುಲಪತಿ ಲೆ|ಜ| ಡಾ| ಎಂ.ಡಿ. ವೆಂಕಟೇಶ್ ತಿಳಿಸಿದರು.

ಆಕ್ಸೆಸ್ ಲೈಫ್‌ನ ಸಂಸ್ಥಾಪಕರು ಮತ್ತು ಮುಖ್ಯಸ್ಥರೂ ಆದ ಗಿರೀಶ್ ನಾಯರ್ ಶುಭ ಹಾರೈಸಿದರು.

### ಕೇಂದ್ರದ ಕಾರ್ಯಾಚರಣೆ

ಮಣಿಪಾಲ ಮಾಧವನಗರದ ಬಿಕ್ಕೊ ರಸ್ತೆ ಬಳಿಯ ಎನರ್ಜಿ ಸೆಲ್ ಎದುರು ಕಾರ್ಯಾಚರಿಸುವ ಈ ಕೇಂದ್ರವು ಕ್ಯಾನ್ಸರ್ ಬಾಧಿತ ಮಕ್ಕಳು ಮತ್ತು ಆರೈಕೆ ಮಾಡುವವರಿಗೆ 3ರಿಂದ 6 ತಿಂಗಳ ಅವಧಿಗೆ ಮತ್ತು ಕೆಲವೊಮ್ಮೆ 1 ವರ್ಷದ ಅವಧಿಯ ಚಿಕಿತ್ಸೆಯ ಸಂಪೂರ್ಣ ಅವಧಿಯಲ್ಲಿ ಉಚಿತವಾಗಿ ವಸತಿ, ಪೌಷ್ಟಿಕ ಆಹಾರ, ಸಮಾಲೋಚನೆ ಮತ್ತು ಶೈಕ್ಷಣಿಕ ಸಹಾಯ ಸೇವೆಗಳನ್ನು ಒದಗಿಸಲಿದೆ. ಆಕ್ಸೆಸ್ ಲೈಫ್ ಅಸಿಸ್ಟೆನ್ಸ್ ಫೌಂಡೇಶನ್, ಭಾರತದ ಎನ್‌ಜಿಒ ನೋಂದಾಯಿತ ಸಂಸ್ಥೆಯಾಗಿದೆ.

ಕನ್ನಡಪ್ರಭ
ಭಾನುವಾರ 1.5.2022

# ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರದ ಉದ್ಘಾಟನೆ

## ಕ್ಯಾನ್ಸರ್ ಪೀಡಿತ ಮಕ್ಕಳ, ಹೆತ್ತವರಿಗೆ ಸೌಲಭ್ಯ ಹಾಗೂ ಬೆಂಬಲ ನೀಡುವ ಹೋಮ್ ಅವೇ ಫ್ರಮ್ ಹೋಮ್

• **ಕನ್ನಡಪ್ರಭ ವಾರ್ತೆ** ಮಣಿಪಾಲ

ಇಲ್ಲಿನ ಕಸ್ತೂರ್ಬಾ ಆಸ್ಪತ್ರೆಯ ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕೊಲಾಜಿ ವಿಭಾಗದ ವತಿಯಿಂದ ಇಲ್ಲಿನ ಮಾಧವನಗರದಲ್ಲಿ ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರವನ್ನು (ಕ್ಯಾನ್ಸರ್ ಪೀಡಿತ ಮಕ್ಕಳು ಮತ್ತು ಅವರ ಆರೈಕೆದಾರರಿಗಾಗಿ ಹೋಮ್ ಅವೇ ಫ್ರಮ್ ಹೋಮ್) ಶನಿವಾರ ಉದ್ಘಾಟಿಸಲಾಯಿತು.

ಆಕ್ಸೆಸ್ ಲೈಫ್ ಲಾಭರಹಿತ (ಎನ್‌ಜಿಒ) ನೋಂದಾಯಿತ, ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಹಾಗೂ ಮಾಹೆ ಮಣಿಪಾಲಗಳ ಜಂಟಿ ಯೋಜನೆಯಾಗಿದೆ. ತಮ್ಮ ಮಗುವಿನ ಕ್ಯಾನ್ಸರ್ ಚಿಕಿತ್ಸೆಗಾಗಿ ಬರುವ ಕುಟುಂಬಗಳಿಗೆ ಸೌಲಭ್ಯ ಮತ್ತು ಬೆಂಬಲವನ್ನು ಒದಗಿಸುತ್ತದೆ. 3 - 6 ತಿಂಗಳು, ಕೆಲವೊಮ್ಮೆ ವರ್ಷದವರೆಗೂ ಚಿಕಿತ್ಸೆಯ ಅವಧಿಯಲ್ಲಿ ಮಕ್ಕಳು ಮತ್ತು ಪೋಷಕರಿಗೆ ವಸತಿ, ನೈರ್ಮಲ್ಯ, ಪೌಷ್ಟಿಕ ಊಟ, ಸಮಾಲೋಚನೆ, ಮನರಂಜನೆ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಇಲ್ಲಿ ಒದಗಿಸಲಾಗುತ್ತದೆ.

ಮಣಿಪಾಲ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ (ಎಂ.ಈ.ಎಂ.ಜಿ.) ಮುಖ್ಯಸ್ಥ ಡಾ. ರಂಜನ್ ಆರ್. ಪೈ ಅವರು ಈ ಕೇಂದ್ರವನ್ನು ಉದ್ಘಾಟಿಸಿ, ಇಂತಹ ಹೋಮ್ ಅವೇ ಫ್ರಮ್ ಹೋಮ್ ಪರಿಕಲ್ಪನೆ ಕರ್ನಾಟಕದಲ್ಲಿಯೇ ಮೊದಲನೇಯದಾಗಿದೆ. ಇದು ಇಲ್ಲಿನ ಬಹಳಷ್ಟು ಸ್ವಯಂಸೇವಕರಿಗೆ ಈ ಸೇವೆಯಲ್ಲಿ ತೊಡಗಿಸಿಕೊಳ್ಳಲು ಅವಕಾಶ ನೀಡಲಿದೆ ಎಂದರು.



ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರವನ್ನು ಉದ್ಘಾಟಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಮಾಹೆ ಸಹ ಕುಲಾಧಿಪತಿ ಡಾ.ಎಚ್.ಎಸ್. ಬಲ್ಲಾಳ್, ಈ ಕೇಂದ್ರದಲ್ಲಿನ ಸೌಲಭ್ಯಗಳು ರೋಗಿಗೆ ಯಾವುದೇ ಹೆಚ್ಚುವರಿ ವೆಚ್ಚವಿಲ್ಲದೆ ಸಿಗಲಿದೆ ಮತ್ತು ಕೇಂದ್ರದ ಕಾರ್ಯಾಚರಣೆಯ ವೆಚ್ಚದ ಹೆಚ್ಚು ಭಾಗ ಆಕ್ಸೆಸ್ ಲೈಫ್ ಅಸಿಸ್ಟೆನ್ಸ್ ಫೌಂಡೇಶನ್ ಭರಿಸಲಿದೆ ಎಂದರು.

ಆಕ್ಸೆಸ್‌ಲೈಫ್‌ನ ಸಂಸ್ಥಾಪಕ ಮುಖ್ಯಸ್ಥ ಗಿರೀಶ್ ನಾಯರ್, , ಕಾರ್ಯ ನಿರ್ವಹಣ ನಿರ್ದೇಶಕ ಅಂಕೀತ್ ದೇವ್, ಮಾಹೆ ಉಪಕುಲಪತಿ ಲೆ.ಜ. ಎಂ.ಡಿ. ವೆಂಕಟೇಶ್ ಅತಿಥಿಗಳಾಗಿದ್ದರು.

ವಿಜಯವಾಣಿ
VIJAYAVANI » MANGALURU
ಭಾನುವಾರ 1 ಮೇ 2022
1 MAY 2022

## ಆಕ್ಸೆಸ್‌ಲೈಫ್ ಅಸಿಸ್ಟೆನ್ಸ್ ಫೌಂಡೇಶನ್, ಮಾಹೆ ಸಹಯೋಗದಲ್ಲಿ ಉಚಿತ ಸೇವೆ

# ಮಣಿಪಾಲದಲ್ಲಿ ಕ್ಯಾನ್ಸರ್ ಪೀಡಿತ ಮಕ್ಕಳ ಆರೈಕೆ ಮನೆ

**ಉಡುಪಿ:** ಕಸ್ತೂರ್ಬಾ ವೈದ್ಯಕೀಯ ಕಾಲೇಜು, ಮಣಿಪಾಲ ಮತ್ತು ಕಸ್ತೂರ್ಬಾ ಆಸ್ಪತ್ರೆ, ಮಾಹೆ ಮಣಿಪಾಲದ ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕೋಲಜಿ ವಿಭಾಗದ ಸಹಯೋಗದೊಂದಿಗೆ ಆಕ್ಸೆಸ್ ಲೈಫ್ ಮಾಹೆ ಮಣಿಪಾಲ ಕೇಂದ್ರವನ್ನು (ಕ್ಯಾನ್ಸರ್ ಪೀಡಿತ ಮಕ್ಕಳು ಮತ್ತು ಅವರ ಆರೈಕೆದಾರರಿಗಾಗಿ ಹೋಮ್ ಆವೇ ಫ್ರಮ್ ಹೋಮ್) ಶನಿವಾರ ಉದ್ಘಾಟಿಸಲಾಯಿತು.

ಮಣಿಪಾಲ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ ಮುಖ್ಯಸ್ಥ ಡಾ.ರಂಜನ್ ಆರ್. ಪೈ ಕೇಂದ್ರವನ್ನು ಉದ್ಘಾಟಿಸಿ, ಈ ಕೇಂದ್ರ ಕ್ಯಾನ್ಸರ್ ಪೀಡಿತ ಮಕ್ಕಳು ಮತ್ತು ಅವರ ಆರೈಕೆದಾರರಿಗಾಗಿ ರಾಜ್ಯದ ಮೊದಲ ಹೋಮ್ ಅವೇ ಫ್ರಮ್ ಹೋಮ್ ಪರಿಕಲ್ಪನೆ. ಇದು ಮಕ್ಕಳಿಗೆ ಮತ್ತು ಪಾಲಕರಿಗೆ ಆಸ್ಪತ್ರೆಯಲ್ಲಿರುವ ವೇಳೆ ಸಮಗ್ರ ಆರೈಕೆಯನ್ನು ಒದಗಿಸುತ್ತದೆ. ಈ ಪ್ರದೇಶದ ಬಹಳಷ್ಟು ಸ್ವಯಂಸೇವಕರಿಗೆ ಈ ಸೇವೆಯಲ್ಲಿ ತಾವು ತೊಡಗಿಸಿಕೊಳ್ಳಲು ಕೇಂದ್ರ ಅವಕಾಶ ಒದಗಿಸಲಿದೆ ಎಂದರು.

ಆಕ್ಸೆಸ್‌ಲೈಫ್ ಸಹ ಸಂಸ್ಥಾಪಕ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ಅಂಕಿತ್ ದೇವ್ ಮಾತನಾಡಿ, ಕೇಂದ್ರದ ಮೂಲಕ ನಾವು ಚಿಕಿತ್ಸೆ ನೀಡುವ ಎಲ್ಲ ವೈದ್ಯರು, ಅರೆ ವೈದ್ಯಕೀಯ ತಂಡ ಮತ್ತು ಕುಟುಂಬಗಳನ್ನು ಬೆಂಬಲಿಸಲು ಸಾಧ್ಯವಾಗಲಿದೆ. ಮಣಿಪಾಲದಲ್ಲಿ ನಮ್ಮ ವಿಸ್ತರಣೆ ಮಕ್ಕಳ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲು ನಮಗೆ ಅನುವು ಮಾಡಿಕೊಡುತ್ತದೆ ಎಂದರು.

ಮಾಹೆ ಮಣಿಪಾಲದ ಉಪಕುಲಪತಿ ಲೆಫ್ಟಿನೆಂಟ್ ಜನರಲ್ ಡಾ.ಎಂ.ಡಿ.ವೆಂಕಟೇಶ್, ಮಣಿಪಾಲದಲ್ಲಿ ಈ ಕೇಂದ್ರದ ಆರಂಭಕ್ಕೆ ಬಹಳವಾಗಿ ಪ್ರಯತ್ನಿಸಿ ಆಕ್ಸೆಸ್‌ಲೈಫ್ ಪ್ರತಿಷ್ಠಾನದೊಂದಿಗೆ ಒಪ್ಪಂದ ಮಾಡಿಕೊಂಡಿದ್ದೇವೆ. ಕಸ್ತೂರ್ಬಾ ಆಸ್ಪತ್ರೆಯ ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕೋಲಜಿ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳಲ್ಲಿ ಹೆಚ್ಚಿನವರು ರಾಜ್ಯದ ಗ್ರಾಮೀಣ ಪ್ರದೇಶದಿಂದ ಬರುತ್ತಿದ್ದಾರೆ. ಕೇಂದ್ರಕ್ಕಾಗಿ ಮಾಹೆ ಎರಡು ವಸತಿಗೃಹಗಳನ್ನು ಒದಗಿಸಿದೆ. ಪ್ರತಿಷ್ಠಾನ ಇದನ್ನು 12 ಕುಟುಂಬಗಳಿಗೆ ಆತಿಥ್ಯ ನೀಡಬಹುದಾದ ನೈರ್ಮಲ್ಯಯುಕ್ತ ವಸತಿಗೃಹವನ್ನಾಗಿ ಮಾರ್ಪಾಟು ಮಾಡಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮಾಹೆ ಸಹ ಕುಲಾಧಿಪತಿ ಡಾ.ಎಚ್.ಎಸ್.ಬಲ್ಲಾಳ್, ಬಾಲ್ಯದ ಕ್ಯಾನ್ಸರನ್ನು ಗುಣಪಡಿಸಬಹುದು. ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರ ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿಂದ ಚಿಕಿತ್ಸೆ ತ್ಯಜಿಸುವುದು ಮತ್ತು ನಿರಾಕರಿಸುವವರ ಮನ ಪರಿವರ್ತನೆಯ ಗುರಿ ಹೊಂದಿದೆ. ಎಲ್ಲ ಸೌಲಭ್ಯಗಳು ರೋಗಿಗೆ ಹೆಚ್ಚುವರಿ ವೆಚ್ಚವಿಲ್ಲದೆ ಸಿಗಲಿದೆ. ಕೇಂದ್ರದ ಕಾರ್ಯಾಚರಣೆಯ ವೆಚ್ಚದ ಹೆಚ್ಚು ಭಾಗವನ್ನು ಆಕ್ಸೆಸ್ ಲೈಫ್ ಅಸಿಸ್ಟೆನ್ಸ್ ಫೌಂಡೇಶನ್ ಭರಿಸಲಿದೆ ಎಂದರು.




ಮಣಿಪಾಲದಲ್ಲಿ ಆಕ್ಸೆಸ್ ಲೈಫ್ ಮಾಹೆ ಮಣಿಪಾಲ ಕೇಂದ್ರವನ್ನು ಶನಿವಾರ ಮಣಿಪಾಲ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ ಮುಖ್ಯಸ್ಥ ಡಾ.ರಂಜನ್ ಆರ್. ಪೈ ಕೇಂದ್ರವನ್ನು ಉದ್ಘಾಟಿಸಿದರು. ಆಕ್ಸೆಸ್‌ಲೈಫ್ ಕಾರ್ಯನಿರ್ವಾಹಕ ನಿರ್ದೇಶಕ ಅಂಕಿತ್ ದೇವ್, ಮಾಹೆ ಉಪಕುಲಪತಿ ಡಾ.ಎಂ.ಡಿ.ವೆಂಕಟೇಶ್ ಮೊದಲಾದವರು ಇದ್ದರು.

### ವಸತಿ, ಆಹಾರ, ಸಮಾಲೋಚನೆ ಸೇವೆ

ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಮತ್ತು ಆಕ್ಸೆಸ್‌ಲೈಫ್ ಅಸಿಸ್ಟೆನ್ಸ್ ಫೌಂಡೇಶನ್‌ನ ಜಂಟಿ ಯೋಜನೆಯಾಗಿರುವ ಈ ಕೇಂದ್ರ ಕ್ಯಾನ್ಸರ್ ಪೀಡಿತ ಮಕ್ಕಳಿಗೆ ಮತ್ತು ಅವರ ಆರೈಕೆ ಮಾಡುವವರಿಗೆ ಉಚಿತವಾಗಿ ವಸತಿ, ಪೌಷ್ಟಿಕ ಆಹಾರ, ಸಮಾಲೋಚನೆ ಮತ್ತು ಶೈಕ್ಷಣಿಕ ಸಹಾಯ ಸೇವೆಗಳನ್ನು ಒದಗಿಸುತ್ತದೆ. ಮಣಿಪಾಲ ಮಾಧವ ನಗರದ ಬಿಕ್ಕೂ ರಸ್ತೆಯ ಎನರ್ಜಿ ಸೆಲ್ ಎದುರು ಆಕ್ಸೆಸ್ ಲೈಫ್ ಕೇಂದ್ರ ಇರಲಿದೆ. ಆಕ್ಸೆಸ್ ಲೈಫ್ ಅಸಿಸ್ಟೆನ್ಸ್ ಫೌಂಡೇಶನ್ ಭಾರತದ ಲಾಭರಹಿತ (ಎನ್‌ಜಿಒ)ಸಂಸ್ಥೆ, ಮಗುವಿನ ಕ್ಯಾನ್ಸರ್ ಚಿಕಿತ್ಸೆಗಾಗಿ ಬರುವ ಕುಟುಂಬಗಳಿಗೆ ಬಹುಸೌಲಭ್ಯ ಮತ್ತು ಬೆಂಬಲದ ಆರೈಕೆ ಒದಗಿಸುತ್ತದೆ. 3 ರಿಂದ 6 ತಿಂಗಳ ಅವಧಿಯವರೆಗೆ ಮತ್ತು ಕೆಲವೊಮ್ಮೆ ಒಂದು ವರ್ಷದ ಅವಧಿಯ ಚಿಕಿತ್ಸೆಯ ಸಂಪೂರ್ಣ ಅವಧಿಯಲ್ಲಿ ಮಕ್ಕಳು ಮತ್ತು ಅವರ ಪಾಲಕರಿಗೆ ವಸತಿ, ನೈರ್ಮಲ್ಯದ ವಾತಾವರಣ, ಪೌಷ್ಟಿಕ ಆಹಾರ, ಸಮಾಲೋಚನೆ, ಮನರಂಜನಾ ಮತ್ತು ಶೈಕ್ಷಣಿಕ ಸಹಾಯ ಸೌಲಭ್ಯ ಒದಗಿಸುತ್ತದೆ.

ಪ್ರಜಾವಾಣಿ
ಭಾನುವಾರ • ಮೇ 1, 2022

# ಕ್ಯಾನ್ಸರ್ ಪೀಡಿತರು, ಆರೈಕೆದಾರರಿಗೆ ನೆರವು

## ಆಕ್ಸೆಸ್‌ಲೈಫ್, ಮಾಹೆ ಮಣಿಪಾಲ ಕೇಂದ್ರ ಉದ್ಘಾಟಿಸಿದ ಡಾ.ರಂಜನ್ ಆರ್.ಪೈ

ಪ್ರಜಾವಾಣಿ ವಾರ್ತೆ

ಉಡುಪಿ: ಮಣಿಪಾಲದ ಕಸ್ತೂರಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕಾಲಜಿ ವಿಭಾಗದ ಸಹಯೋಗದೊಂದಿಗೆ ಶನಿವಾರ ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರವನ್ನು ಮಣಿಪಾಲ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ (ಎಂಇಎಂಜಿ) ಮುಖ್ಯಸ್ಥ ಡಾ.ರಂಜನ್ ಆರ್.ಪೈ ಉದ್ಘಾಟಿಸಿದರು.

ಬಳಿಕ ಮಾತನಾಡಿ, ರಾಜ್ಯದ ಮೊದಲ ಕ್ಯಾನ್ಸರ್ ಪೀಡಿತ ಮಕ್ಕಳು ಹಾಗೂ ಅವರ ಆರೈಕೆ ಮಾಡುವವರಿಗೆ ಹೋಂ ಅವೇ ಫ್ರಮ್ ಹೋಂ ಪರಿಕಲ್ಪನೆಯೊಂದಿಗೆ ಕೇಂದ್ರವನ್ನು ಸ್ಥಾಪಿಸಲಾಗಿದೆ. ಆಸ್ಪತ್ರೆಯಲ್ಲಿ ಕ್ಯಾನ್ಸರ್ ಚಿಕಿತ್ಸೆ ಪಡೆಯುವ ಸಂದರ್ಭದಲ್ಲಿ ಪೂರಕವಾಗಿ ಕ್ಯಾನ್ಸರ್ ಪೀಡಿತ ಮಕ್ಕಳಿಗೆ ಹಾಗೂ ಅವರ ಆರೈಕೆದಾರರಿಗೆ ಸಮಗ್ರ ಆರೈಕೆಯನ್ನು ಕೇಂದ್ರದಲ್ಲಿ ಒದಗಿಸಲಾಗುತ್ತದೆ. ಸ್ವಯಂಸೇವಕರಿಗೆ ಸೇವೆಯಲ್ಲಿ ತೊಡಗಿಸಿಕೊಳ್ಳಲು ಕೇಂದ್ರ ವೇದಿಕೆಯಾಗಲಿದೆ ಎಂದರು.

ಆಕ್ಸೆಸ್‌ಲೈಫ್ ಸಹ ಸಂಸ್ಥಾಪಕ ಅಂಕಿತ್ ದೇವ್ ಮಾತನಾಡಿ, 'ಮಾಹೆ ಸಹಯೋಗದಲ್ಲಿ ಹೊಸ ಕೇಂದ್ರ ಪ್ರಾರಂಭಿಸುತ್ತಿರುವುದು ಸಂತಸ ತಂದಿದೆ. ಕೇಂದ್ರದ ಮೂಲಕ ಚಿಕಿತ್ಸೆ ನೀಡುವ ವೈದ್ಯರು, ಅರೆ ವೈದ್ಯಕೀಯ ತಂಡ ಹಾಗೂ ಕುಟುಂಬಗಳಿಗೆ ನೆರವು ನೀಡಲಾಗುವುದು. ಬಾಲ್ಯದ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲು ಈ ಕೇಂದ್ರದ ಮೂಲಕ ಸಾಧ್ಯವಾಗಲಿದೆ' ಎಂದರು.

ಮಾಹೆ ಮಣಿಪಾಲ ಕುಲಪತಿ ಡಾ.ಎಂ.ಡಿ.ವೆಂಕಟೇಶ್ ಮಾತನಾಡಿ, 'ಕಸ್ತೂರಬಾ ಆಸ್ಪತ್ರೆಯ ಮಕ್ಕಳ ರಕ್ತಶಾಸ್ತ್ರ ಮತ್ತು ಅಂಕೊಲೊಜಿ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳಲ್ಲಿ ಹೆಚ್ಚಿನವರು ಗ್ರಾಮೀಣ ಪ್ರದೇಶದಿಂದ ಬರುತ್ತಿದ್ದಾರೆ. ಅವರ ಅನುಕೂಲಕ್ಕಾಗಿ ಮಾಹೆಯು ಆಸ್ಪತ್ರೆಯ ಸಮೀಪದಲ್ಲಿ ಎರಡು ವಸತಿ ಗೃಹಗಳನ್ನು ಒದಗಿಸಿದ್ದು, ಆಕ್ಸೆಸ್ ಲೈಫ್ ಅಸಿಸ್ಟೆನ್ಸ್ ಫೌಂಡೇಶನ್ ನವೀಕರಿಸಿದೆ. 12 ಕುಟುಂಬಗಳಿಗೆ ಆತಿಥ್ಯ ನೀಡಬಹುದಾದ ನೈರ್ಮಲ್ಯಯುಕ್ತ ವಸತಿಗೃಹ ನಿರ್ಮಿಸಲಾಗಿದೆ ಎಂದರು.

ಮಾಹೆ ಸಹ ಕುಲಾಧಿಪತಿ ಡಾ.ಎಚ್.ಎಸ್.ಬಲ್ಲಾಳ್ ಮಾತನಾಡಿ, 'ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರವು ಕ್ಯಾನ್ಸರ್ ಪೀಡಿತ ಮಕ್ಕಳ ಹಾಗೂ ಆರೈಕೆದಾರರಿಗೆ ಬಹಳ ಉಪಯುಕ್ತವಾಗಿದೆ. ಜತೆಗೆ, ಆಸ್ಪತ್ರೆಯು ಮಕ್ಕಳಿಗೆ ವಿವಿಧ ನಿಧಿಗಳು ಮತ್ತು ಯೋಜನೆಗಳ ಮೂಲಕ ಚಿಕಿತ್ಸೆಗೆ ನೆರವನ್ನು ಮುಂದುವರಿಸಲಿದೆ. ಈ ಎಲ್ಲ ಸೌಲಭ್ಯಗಳು ರೋಗಿಗೆ ಯಾವುದೇ ಹೆಚ್ಚುವರಿ ವೆಚ್ಚವಿಲ್ಲದೆ ಸಿಗಲಿದೆ' ಎಂದರು.

ಆಕ್ಸೆಸ್‌ಲೈಫ್ ಸಂಸ್ಥಾಪಕರಾದ ಗಿರೀಶ್ ನಾಯರ್ ಇದ್ದರು.



ಮಣಿಪಾಲದ ಕಸ್ತೂರಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕಾಲಜಿ ವಿಭಾಗದ ಸಹಯೋಗದೊಂದಿಗೆ ಶನಿವಾರ ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರವನ್ನು ಮಣಿಪಾಲ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ (ಎಂಇಎಂಜಿ) ಮುಖ್ಯಸ್ಥ ಡಾ.ರಂಜನ್ ಆರ್.ಪೈ ಉದ್ಘಾಟಿಸಿದರು.

### ಕೇಂದ್ರದ ವಿಶೇಷ; ವಿವಿಧ ಸೌಲಭ್ಯ

ಕ್ಯಾನ್ಸರ್ ರೋಗ ಇರುವ ಮಕ್ಕಳಿಗೆ ಹಾಗೂ ಅವರ ಆರೈಕೆ ಮಾಡುವವರಿಗೆ ಉಚಿತವಾಗಿ ವಸತಿ, ಪೌಷ್ಟಿಕ ಆಹಾರ, ಸಮಾಲೋಚನೆ ಹಾಗೂ ಶೈಕ್ಷಣಿಕ ಸಹಾಯ ಸೇವೆಗಳನ್ನು ಒದಗಿಸಲಾಗುವುದು. ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಮಾಹೆ ಮಣಿಪಾಲ ಹಾಗೂ ಆಕ್ಸೆಸ್‌ಲೈಫ್ ಸಂಸ್ಥೆಯ ಜಂಟಿ ಯೋಜನೆ ಇದಾಗಿದೆ. ಆಕ್ಸೆಸ್ ಲೈಫ್ ಅಸಿಸ್ಟೆನ್ಸ್ ಫೌಂಡೇಶನ್ ಮಕ್ಕಳ ಕ್ಯಾನ್ಸರ್ ಚಿಕಿತ್ಸೆಗಾಗಿ ಕ್ಯಾನ್ಸರ್ ಕೇಂದ್ರಕ್ಕೆ ಬರುವ ಕುಟುಂಬಗಳಿಗೆ ಬಹು ಸೌಲಭ್ಯ ಹಾಗೂ ಬೆಂಬಲದ ಆರೈಕೆಯನ್ನು ಒದಗಿಸುತ್ತಾ ಬಂದಿದೆ. 3 ರಿಂದ 6 ತಿಂಗಳವರೆಗೂ, ಸಂದರ್ಭ ಅನುಸಾರವಾಗಿ ವರ್ಷದ ಅವಧಿಯ ಚಿಕಿತ್ಸೆಯಲ್ಲಿ ಕ್ಯಾನ್ಸರ್ ಪೀಡಿತ ಮಕ್ಕಳು ಹಾಗೂ ಅವರ ಪೋಷಕರಿಗೆ ವಸತಿ, ನೈರ್ಮಲ್ಯ, ಪೌಷ್ಟಿಕಾಂಶವುಳ್ಳ ಊಟ, ಸಮಾಲೋಚನೆ, ಮನರಂಜನೆ ಹಾಗೂ ಶೈಕ್ಷಣಿಕ ಸಹಾಯ ಸೌಲಭ್ಯವನ್ನು ಸಂಸ್ಥೆ ಒದಗಿಸುತ್ತಾ ಬಂದಿದೆ.

THE HINDU
SUNDAY, MAY 1, 2022

# Centre to provide support to children with cancer

## The facility in Manipal provides free shelter and food to the patients and their caregivers

SPECIAL CORRESPONDENT
MANGALURU

Kasturba Medical College and Hospital, Manipal Academy of Higher Education (MAHE), and Access Life Assistance Foundation jointly opened 'a home away from home' (or a centre) for children with cancer and their caregivers, in Manipal on Saturday.

It provides free accommodation, nutrition, counselling, and education support services to children with cancer and their caregivers.

The home, AccessLife MAHE Manipal Centre, is located opposite Energy Cell, near BQ Road, Madhavanagar in Manipal. Access Life Assistance Foundation, India, is a non-profit organisation registered company, providing multi-disciplinary supportive care to families who come to cancer centre for their child's cancer treatment. They offer accommodation, a hygienic environment, nutritional meals, counselling, recreational and educational support, both for the children and their parents during the entire duration of treatment which goes to the duration of three to six months and sometimes even a year.



AccessLife MAHE Manipal Centre can host 12 families at any given time. • SPECIAL ARRANGEMENT.

Speaking after its inauguration, Ranjan R. Pai, chairman, Manipal Education and Medical Group (MEMG), Bengaluru, said that the centre provides holistic care to children and their caregivers belonging to lower socio-economic strata while the cancer treatment is ongoing in the hospital.

The centre also provides an avenue for volunteers from this region to step up and engage themselves with these children and families to make their journey through cancer treatment more pleasant.

H.S. Ballal, Pro-Chancellor, MAHE, said: "Childhood cancers being curable, the centre aims at reducing treatment abandonment and refusal by the caregivers due to financial and social reasons by providing these facilities which reduces the out-of-pocket expenditure during cancer treatment while the hospital continues to help these children with treatment through various funds and schemes. All these facilities come at no extra cost to the patient and the operational cost for the centre would be borne largely by the Access Life Assistance Foundation."

M.D. Venkatesh, Vice-Chancellor, MAHE, said MAHE signed a memorandum of understanding (MoU) with the foundation as more than two-thirds of children with cancer taking treatment in the Division of Pediatric Hematology and Oncology of Kasturba Hospital were coming from rural interiors of Karnataka. MAHE provides two residential quarters close to the hospital and Access Life Assistance Foundation renovated it and made it into a hygienic accommodation which can host 12 families at any given time.

Girish Nair, founder and chairman, Ankeet Dave, co-founder and executive director, AccessLife Assistance Foundation, spoke, according to a release by the Medical Superintendent of the hospital.

SUNDAY TIMES OF INDIA, MANGALURU
MAY 1, 2022

# Home for children with cancer inaugurated

TIMES NEWS NETWORK

**Udupi:** Kasturba Medical College, Manipal, and Kasturba Hospital, MAHE, in association with the department of paediatric hematology and oncology, inaugurated AccessLife MAHE, Manipal Centre (home away from home for children with cancer and their caregivers), on Saturday.

The centre provides free accommodation, nutrition, counselling and education support services to children with cancer and their caregivers, and is located opposite Energy Cell, Madhavanagar, Manipal. Access Life Assistance Foundation, India, is a non-profit organisation registered company, providing multi-disciplinary supportive care to families who come to the cancer centre for their child's cancer treatment.

Udayavani- Honnavara
01/05/2022

# ಮಣಿಪಾಲದಲ್ಲಿ ಕ್ಯಾನ್ಸರ್ ಪೀಡಿತ ಮಕ್ಕಳಿಗೆ- ಪಾಲಕರಿಗೆ ವಿಶೇಷ ಮನೆ




**ಹೊನ್ನಾವರ: ಮಣಿಪಾಲದಲ್ಲಿ ಕ್ಯಾನ್ಸರ್ ಪೀಡಿತ ಮಕ್ಕಳಿಗೆ, ಪಾಲಕರಿಗೆ ವಿಶೇಷ ಮನೆ ಉದ್ಘಾಟಿಸಲಾಯಿತು.**

**ಹೊನ್ನಾವರ:** ಕ್ಯಾನ್ಸರ್ ಪೀಡಿತ ಮಕ್ಕಳ ಮತ್ತು ಅವರ ಆರೈಕೆದಾರರಿಗಾಗಿ ಉಚಿತ ವಸತಿ, ಪೌಷ್ಟಿಕ ಆಹಾರ, ಸಮಾಲೋಚನೆ, ಶೈಕ್ಷಣಿಕ ಸೇವೆ ಒದಗಿಸಲು ಆಕ್ಸೆಸ್ ಲೈಫ್ ಮತ್ತು ಮಾಹೆ ಮಣಿಪಾಲ ಜಂಟಿಯಾಗಿ ಸಿದ್ಧಪಡಿಸಿದ ವಿಶೇಷ ಮನೆಯನ್ನು ಮಣಿಪಾಲ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ ಮುಖ್ಯಸ್ಥ ರಂಜನ್ ಆರ್. ಪೈ ಉದ್ಘಾಟಿಸಿದ್ದಾರೆ.

ಆಕ್ಸೆಸ್ ಲೈಫ್ ಅಸಿಸ್ಟಂಟ್ ಫೌಂಡೇಶನ್ ಭಾರತದ ಲಾಭರಹಿತ ನೋಂದಾಯಿತ ಸಂಸ್ಥೆಯಾಗಿದ್ದು, ಮಗುವಿನ ಕ್ಯಾನ್ಸರ್ ಚಿಕಿತ್ಸೆಗಾಗಿ ಕೇಂದ್ರಕ್ಕೆ ಬರುವ ಕುಟುಂಬಗಳಿಗೆ ಬಹುಸೌಲಭ್ಯ ಮತ್ತು ಬೆಂಬಲ ಮತ್ತು ಆರೈಕೆ ಒದಗಿಸುತ್ತದೆ. 3-6 ತಿಂಗಳ ಅವಧಿಯವರೆಗೆ ಮತ್ತು ಕೆಲವೊಮ್ಮೆ ಒಂದು ವರ್ಷ ಚಿಕಿತ್ಸೆ ಸಂಪೂರ್ಣ ಅವಧಿಯಲ್ಲಿ ಮಕ್ಕಳು ಅವರ ಪೋಷಕರಿಗೆ ವಸತಿ, ನೈರ್ಮಲ್ಯದ ವಾತಾವರಣ, ಪೌಷ್ಟಿಕಾಂಶವುಳ್ಳ ಊಟ, ಸಮಾಲೋಚನೆ, ಮನರಂಜನೆ ಮತ್ತು ಶೈಕ್ಷಣಿಕ ಸೌಲಭ್ಯವನ್ನು ಒದಗಿಸುತ್ತದೆ ಎಂದು ರಂಜನ್ ಆರ್. ಪೈ ತಿಳಿಸಿದ್ದಾರೆ.

ಆಕ್ಸೆಸ್ ಲೈಫ್ ಸಹಸಂಸ್ಥಾಪಕ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ಅಂಕಿತ್ ದೇವ್ ಮಾತನಾಡಿದರು.

ಮಾಹೆಯಉಪಕುಲಪತಿಲೆಫ್ಟಿನೆಂಟ್ ಜನರಲ್ ಡಾ| ಎಂ.ಡಿ. ವೆಂಕಟೇಶ ಈ ನಿಟ್ಟಿನಲ್ಲಿ ಕೆಲಸಮಾಡಿದ ತಂಡವನ್ನು ಅಭಿನಂದಿಸಿದರು. ಮಾಹೆ ಸಮೀಪದ ಎರಡು ವಸತಿಗೃಹವನ್ನು ಒದಗಿಸಿ ನವೀಕರಿಸಲಾಗಿದೆ. 12 ಕುಟುಂಬಗಳಿಗೆ ಇಲ್ಲಿ ವ್ಯವಸ್ಥೆ ಇದೆ ಎಂದರು. ಮಾಹೆಯ ಕುಲಾಧಿಪತಿ ಡಾ| ಎಚ್.ಎಸ್. ಬಲ್ಲಾಳ್ ಮಾತನಾಡಿದರು. ಕಸ್ತೂರ್ಬಾ ಆಸ್ಪತ್ರೆ ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕೋಲಜಿ ವಿಭಾಗದ ಸಹಯೋಗದೊಂದಿಗೆ ಈ ಕೇಂದ್ರವನ್ನು ಉದ್ಘಾಟಿಸಲಾಯಿತು.

**Udupi9**

**30/04/2022**

UDUPI9



ಆರೋಗ್ಯ ಉಡುಪಿ

# ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರದ ಉದ್ಘಾಟನೆ (ಹೋಮ್ ಆವೇ ಫ್ರಮ್ ಹೋಮ್")

2 days ago

Spread the love





*ಉಚಿತವಾಗಿ ವಸತಿ, ಪೌಷ್ಟಿಕ ಆಹಾರ, ಸಮಾಲೋಚನೆ ಮತ್ತು ಶೈಕ್ಷಣಿಕ ಸಹಾಯ ಸೇವೆಗಳು*

ಮಣಿಪಾಲ, 30ನೇ ಏಪ್ರಿಲ್ 2022: ಕಸ್ತೂರ್ಬಾ ವೈದ್ಯಕೀಯ ಕಾಲೇಜು, ಮಣಿಪಾಲ ಮತ್ತು ಕಸ್ತೂರ್ಬಾ ಆಸ್ಪತ್ರೆ, ಮಾಹೆ ಮಣಿಪಾಲದ ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕೊಲಾಜಿ ವಿಭಾಗದ ಸಹಯೋಗದೊಂದಿಗೆ ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರವನ್ನು (ಕ್ಯಾನ್ಸರ್ ಪೀಡಿತ ಮಕ್ಕಳು ಮತ್ತು ಅವರ ಆರೈಕೆದಾರರಿಗಾಗಿ ಹೋಮ್ ಆವೇ ಫ್ರಮ್ ಹೋಮ್) ಇಂದು ಉದ್ಘಾಟಿಸಲಾಯಿತು. ಇದು ಕ್ಯಾನ್ಸರ್ ಇರುವ ಮಕ್ಕಳಿಗೆ ಮತ್ತು ಅವರ ಆರೈಕೆ ಮಾಡುವವರಿಗೆ ಉಚಿತವಾಗಿ ವಸತಿ, ಪೌಷ್ಟಿಕ ಆಹಾರ, ಸಮಾಲೋಚನೆ ಮತ್ತು ಶೈಕ್ಷಣಿಕ ಸಹಾಯ ಸೇವೆಗಳನ್ನು ಒದಗಿಸುತ್ತದೆ. ಇದು ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಮಾಹೆ ಮಣಿಪಾಲ ಮತ್ತು ಆಕ್ಸೆಸ್‌ಲೈಫ್‌ನ ಜಂಟಿ ಯೋಜನೆಯಾಗಿದೆ. ಮಣಿಪಾಲ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ (ಎಂ ಈ ಎಂ ಜಿ) ಮುಖ್ಯಸ್ಥರಾದ ಡಾ.ರಂಜನ್ ಆರ್ ಪೈ ಕೇಂದ್ರವನ್ನು

ಉದ್ಘಾಟಿಸಿದರು. ಆಕ್ಸೆಸ್‌ಲೈಫ್ ಇದರ ಸಂಸ್ಥಾಪಕರು ಮತ್ತು ಮುಖ್ಯಸ್ಥರಾದ ಶ್ರೀ ಗಿರೀಶ್ ನಾಯರ್, ಸಹ-ಸಂಸ್ಥಾಪಕ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಅಂಕೀತ್ ದೇವ್, ಮಾಹೆ ಮಣಿಪಾಲದ ಉಪಕುಲಪತಿಗಳಾದ ಲೆಫ್ಟಿನೆಂಟ್ ಜನರಲ್ (ಡಾ) ಎಂ ಡಿ ವೆಂಕಟೇಶ್ ಗೌರವ ಅತಿಥಿಅತಿಥಿಗಳಾಗಿದ್ದರು. ಮಾಹೆ ಮಣಿಪಾಲದ ಸಹ ಕುಲಾಧಿಪತಿ ಡಾ.ಎಚ್.ಎಸ್.ಬಲ್ಲಾಳ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರವು ಎನರ್ಜಿ ಸೆಲ್ ಎದುರು, ಬಿಕ್ರ್ಯೂ ರಸ್ತೆ ಬಳಿ, ಮಾಧವನಗರ, ಮಣಿಪಾಲ ಇಲ್ಲಿ ಕಾರ್ಯಾಚರಿಸಲಿದೆ. ಆಕ್ಸೆಸ್ ಲೈಫ್ ಅಸಿಸ್ಟೆನ್ಸ್ ಫೌಂಡೇಶನ್, ಭಾರತದ ಲಾಭರಹಿತ (ಎನ್ ಜಿ ಓ) ನೋಂದಾಯಿತ ಸಂಸ್ಥೆಯಾಗಿದ್ದು , ತಮ್ಮ ಮಗುವಿನ ಕ್ಯಾನ್ಸರ್ ಚಿಕಿತ್ಸೆಗಾಗಿ ಕ್ಯಾನ್ಸರ್ ಕೇಂದ್ರಕ್ಕೆ ಬರುವ ಕುಟುಂಬಗಳಿಗೆ ಬಹುಸೌಲಭ್ಯ ಮತ್ತು ಬೆಂಬಲದ ಆರೈಕೆಯನ್ನು ಒದಗಿಸುತ್ತದೆ. 3 ರಿಂದ 6 ತಿಂಗಳ ಅವಧಿಯವರೆಗೆ ಮತ್ತು ಕೆಲವೊಮ್ಮೆ ಒಂದು ವರ್ಷದ ಅವಧಿಯ ಚಿಕಿತ್ಸೆಯ ಸಂಪೂರ್ಣ ಅವಧಿಯಲ್ಲಿ ಮಕ್ಕಳು ಮತ್ತು ಅವರ ಪೋಷಕರಿಗೆ ವಸತಿ, ನೈರ್ಮಲ್ಯದ ವಾತಾವರಣ, ಪೌಷ್ಟಿಕಾಂಶವುಳ್ಳ ಊಟ, ಸಮಾಲೋಚನೆ, ಮನರಂಜನಾ ಮತ್ತು ಶೈಕ್ಷಣಿಕ ಸಹಾಯ ಸೌಲಭ್ಯವನ್ನು ಒದಗಿಸುತ್ತದೆ.

ಮಣಿಪಾಲ್ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ (MEMG) ಮುಖ್ಯಸ್ಥ ಡಾ ರಂಜನ್ ಆರ್ ಪೈ ಮಾತನಾಡಿ, " ಮಣಿಪಾಲದ ಈ ಕೇಂದ್ರವು ಕರ್ನಾಟಕದ ಮೊದಲ ಕ್ಯಾನ್ಸರ್ ಪೀಡಿತ ಮಕ್ಕಳು ಮತ್ತು ಅವರ ಆರೈಕೆದಾರರಿಗಾಗಿ ಹೋಮ್ ಅವೇ ಫ್ರಮ್ ಹೋಮ್ ಪರಿಕಲ್ಪನೆಯಾಗಿದೆ. ಇದು ಮಕ್ಕಳಿಗೆ ಮತ್ತು ಅವರ ಆರೈಕೆ ಮಾಡುವವರಿಗೆ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಚಿಕಿತ್ಸೆಯು ನಡೆಯುತ್ತಿರುವಾಗ ಸಮಗ್ರ ಆರೈಕೆಯನ್ನು ಒದಗಿಸುತ್ತದೆ. ಈ ಪ್ರದೇಶದ ಬಹಳಷ್ಟು ಸ್ವಯಂಸೇವಕರಿಗೆ ಈ ಸೇವೆಯಲ್ಲಿ ತಾವು ತೊಡಗಿಸಿಕೊಳ್ಳಲು ಕೇಂದ್ರವು ದಾರಿಯನ್ನು ಒದಗಿಸಲಿದೆ" ಎಂದರು.

ಆಕ್ಸೆಸ್‌ಲೈಫ್ ಇದರ ಸಹ -ಸಂಸ್ಥಾಪಕ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಅಂಕೀತ್ ದೇವ್ ಅವರು , "ಮಾಹೆ ಸಹಯೋಗದೊಂದಿಗೆ ಮಣಿಪಾಲದಲ್ಲಿ ನಮ್ಮ ಹೊಸ ಕೇಂದ್ರವನ್ನು ಪ್ರಾರಂಭಿಸಲು ನಾವು ತುಂಬಾ ಸಂತೋಷಪಡುತ್ತೇವೆ. ಕೇಂದ್ರದ ಮೂಲಕ ನಾವು ಎಲ್ಲಾ ಚಿಕಿತ್ಸೆ ನೀಡುವ ವೈದ್ಯರು, ಅರೆವೈದ್ಯಕೀಯ ತಂಡ ಮತ್ತು ಕುಟುಂಬಗಳನ್ನು ಬೆಂಬಲಿಸಲು ಸಾಧ್ಯವಾಗುವುದಲ್ಲದೆ, ಕರ್ನಾಟಕದಲ್ಲಿ ಮಣಿಪಾಲದಲ್ಲಿ ನಮ್ಮ ವಿಸ್ತರಣೆಯು ಬಾಲ್ಯದ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲು ನಮಗೆ ಅನುವು ಮಾಡಿಕೊಡುತ್ತದೆ" ಎಂದು ಅಭಿಪ್ರಾಯ ಪಟ್ಟರು.

ಮಾಹೆ ಮಣಿಪಾಲದ ಉಪಕುಲಪತಿಗಳಾದ ಲೆಫ್ಟಿನೆಂಟ್ ಜನರಲ್ (ಡಾ) ಎಂ ಡಿ ವೆಂಕಟೇಶ್ ಅವರು ಈ ನಿಟ್ಟಿನಲ್ಲಿ ಕೆಲಸ ಮಾಡಿದ ತಂಡವನ್ನು ಅಭಿನಂದಿಸಿದರು ಮತ್ತು "ಮಾಹೆ, ಈ ಪ್ರತಿಷ್ಠಾನದೊಂದಿಗೆ ಮಣಿಪಾಲದಲ್ಲಿ ಈ ಕೇಂದ್ರದ ಆರಂಭಕ್ಕೆ ಬಹಳವಾಗಿ ಪ್ರಯತ್ನಿಸಿ ಒಪ್ಪಂದವನ್ನು (MoU) ಮಾಡಿಕೊಂಡಿದ್ದೇವೆ. ಏಕೆಂದರೆ ಕಸ್ತೂರ್ಬಾ ಆಸ್ಪತ್ರೆಯ ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕೊಲೊಜಿ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳಲ್ಲಿ 2/3 ಕ್ಕಿಂತ ಹೆಚ್ಚು ಮಕ್ಕಳು ಕರ್ನಾಟಕದ ಗ್ರಾಮೀಣಪ್ರದೇಶದಿಂದ ಬರುತ್ತಿದ್ದಾರೆ. ಕೇಂದ್ರಕ್ಕಾಗಿ ಮಾಹೆಯು ಆಸ್ಪತ್ರೆಯ ಸಮೀಪದಲ್ಲಿ ಎರಡು ವಸತಿ ಗೃಹಗಳನ್ನು ಒದಗಿಸಿದೆ. ಆಕ್ಸೆಸ್ ಲೈಫ್ ಅಸಿಸ್ಟೆನ್ಸ್ ಫೌಂಡೇಶನ್ ಅದನ್ನು ನವೀಕರಿಸಿದೆ ಮತ್ತು ಯಾವುದೇ ಸಮಯದಲ್ಲಿ 12 ಕುಟುಂಬಗಳಿಗೆ ಆತಿಥ್ಯ ನೀಡಬಹುದಾದ ನೈರ್ಮಲ್ಯಯುಕ್ತ ವಸತಿಗೃಹವನ್ನಾಗಿ ಮಾರ್ಪಾಟು ಮಾಡಿದೆ" ಎಂದರು.

ಮಾಹೆ ಸಹ ಕುಲಾಧಿಪತಿಗಳಾದ ಡಾ.ಎಚ್.ಎಸ್. ಬಲ್ಲಾಳ್ ಮಾತನಾಡಿ, "ಬಾಲ್ಯದ ಕ್ಯಾನ್ಸರ್ ಗುಣಪಡಿಸಬಹುದಾಗಿದೆ. ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರವು ಈ ಸೌಲಭ್ಯಗಳನ್ನು ಒದಗಿಸುವ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿಂದ ಆರೈಕೆ ಮಾಡುವವರು ಚಿಕಿತ್ಸೆಯನ್ನು ತ್ಯಜಿಸುವುದು ಮತ್ತು ನಿರಾಕರಿಸುವವರ ಮನ ಪರಿವರ್ತನೆ ಗುರಿಯನ್ನು ಹೊಂದಿದೆ. ಇದರೊಂದಿಗೆ ಆಸ್ಪತ್ರೆಯು ಈ ಮಕ್ಕಳಿಗೆ ವಿವಿಧ ನಿಧಿಗಳು ಮತ್ತು ಯೋಜನೆಗಳ ಮೂಲಕ ಚಿಕಿತ್ಸೆಗೆ ಸಹಾಯ ಮಾಡುವುದನ್ನು ಮುಂದುವರೆಸಲಿದೆ. ಈ ಎಲ್ಲಾ ಸೌಲಭ್ಯಗಳು ರೋಗಿಗೆ ಯಾವುದೇ ಹೆಚ್ಚುವರಿ ವೆಚ್ಚವಿಲ್ಲದೆ ಸಿಗಲಿದೆ ಮತ್ತು ಕೇಂದ್ರದ ಕಾರ್ಯಾಚರಣೆಯ ವೆಚ್ಚದ ಹೆಚ್ಚು ಭಾಗ ಆಕ್ಸೆಸ್ ಲೈಫ್ ಅಸಿಸ್ಟೆನ್ಸ್ ಫೌಂಡೇಶನ್ ಭರಿಸಲಿದೆ" ಎಂದರು.

ವೈದ್ಯಕೀಯ ಅಧೀಕ್ಷಕರು

THE CANARA POST

# AccessLife MAHE, Manipal Centre inaugurated

April 30, 2022 0

**The Center provides free accommodation, nutrition, counseling, education support services to children with cancer and their caregivers**

- ***A joint venture of Kasturba Medical College and Hospital, MAHE Manipal, and Accesslife***
- ***Two residential quarters close to the hospital and Access Life Assistance Foundation renovated***
- ***A hygienic accommodation that can host 12 families at any given time***



**Manipal, April 30, 2022:** Kasturba Medical College and Kasturba Hospital, Manipal in association with the Department of Pediatric Hematology and Oncology inaugurated AccessLife MAHE, Manipal Center today.

The Center, 'Home away from Home' for children with cancer and their caregivers, provides free accommodation, nutrition, counseling, and education support services for them.

This is a joint venture of Kasturba Medical College and Hospital, MAHE Manipal, and Accesslife.

Dr. Ranjan R Pai, Chairman, Manipal Education, and Medical Group (MEMG) inaugurated the center. Girish Nair, Founder and Chairman, Ankeet Dave, Co-Founder, and Executive Director- AccessLife Assistance Foundation, Lt Gen (Dr) M D Venkatesh, Vice-Chancellor, MAHE were the guests of honor. Dr. H S Ballal, Pro-Chancellor, MAHE presided over the program.

In his address, Dr. Ranjan R Pai defined the center as one of its kind and as the first "home away from home" concept in Karnataka.

"It provides holistic care to children and their caregivers belonging to lower socio-economic strata during the cancer treatment. The center also provides an avenue for a lot of volunteers from this region to step up and engage themselves with these children and families to make their journey through cancer treatment more pleasant," he said.

Ankeet Dave said that his organization was delighted to start the new center in Manipal in association with MAHE.

"We are pleased that we will not only be able to support all the treating doctors, paramedical team, and families but our extension to Manipal, Karnataka will also allow us to spread awareness on childhood cancer," he opined.
Lt Gen (Dr) M D Venkatesh congratulated the teamwork.




He said that MAHE had a Memorandum of Understanding (MoU) with this foundation as more than 2/3rd of children with cancer taking treatment in the Division of Pediatric Hematology and Oncology of Kasturba Hospital were from rural interiors of Karnataka.

MAHE provided two residential quarters close to the hospital and Access Life Assistance Foundation renovated it and made it into a hygienic accommodation that can host 12 families at any given time.

Dr. H S Ballal, Pro-Chancellor said that the center aims at reducing treatment abandonment and refusal by the caregivers due to financial and social reasons by providing these facilities.

All these facilities come at no extra cost to the patient and the operational cost for the center would be borne largely by the Access Life Assistance Foundation.

AccessLife MAHE, Manipal Center is located opposite Energy Cell, near BQ road, Madhavanagar, Manipal. Access Life Assistance Foundation, India is a Non-profit organization registered company, providing multi-disciplinary supportive care to families who come to the cancer center for their child's cancer treatment.

They offer accommodation, a hygienic environment, nutritional meals, counseling, recreational and educational support, both for the children and their parents during the entire duration of treatment which goes to the duration of 3-6 months and sometimes even a year.

# ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರದ ಉದ್ಘಾಟನೆ

April 30, 2022 · 83 · No Comment




ಮಣಿಪಾಲ, 30ನೇ ಏಪ್ರಿಲ್ 2022: ಕಸ್ತೂರ್ಬಾ ವೈದ್ಯಕೀಯ ಕಾಲೇಜು, ಮಣಿಪಾಲ ಮತ್ತು ಕಸ್ತೂರ್ಬಾ ಆಸ್ಪತ್ರೆ, ಮಾಹೆ ಮಣಿಪಾಲದ ಮಕ್ಕಳ ರಕ್ತಶಾಸ್ತ್ರ, ಮತ್ತು ಆಂಕೊಲಾಜಿ ವಿಭಾಗದ ಸಹಯೋಗದೊಂದಿಗೆ ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರವನ್ನು (ಕ್ಯಾನ್ಸರ್ ಪೀಡಿತ ಮಕ್ಕಳು ಮತ್ತು ಅವರ ಆರೈಕೆದಾರರಿಗಾಗಿ ಹೋಮ್ ಅವೇ ಫ್ರಮ್ ಹೋಮ್) ಇಂದು ಉದ್ಘಾಟಿಸಲಾಯಿತು. ಇದು ಕ್ಯಾನ್ಸರ್ ಇರುವ ಮಕ್ಕಳಿಗೆ ಮತ್ತು ಅವರ ಆರೈಕೆ ಮಾಡುವವರಿಗೆ ಉಚಿತವಾಗಿ ವಸತಿ, ಪೌಷ್ಟಿಕ ಆಹಾರ, ಸಮಾಲೋಚನೆ ಮತ್ತು ಶೈಕ್ಷಣಿಕ ಸಹಾಯ ಸೇವೆಗಳನ್ನು ಒದಗಿಸುತ್ತದೆ. ಇದು ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಮಾಹೆ ಮಣಿಪಾಲ ಮತ್ತು ಆಕ್ಸೆಸ್‌ಲೈಫ್‌ನ ಜಂಟಿ

ಯೋಜನೆಯಾಗಿದೆ. ಮಣಿಪಾಲ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ (ಎಂ ಈ ಎಂ ಜಿ) ಮುಖ್ಯಸ್ಥರಾದ ಡಾ.ರಂಜನ್ ಆರ್ ಪೈ ಕೇಂದ್ರವನ್ನು ಉದ್ಘಾಟಿಸಿದರು. ಆಕ್ಸೆಸ್‌ಲೈಫ್ ಇದರ ಸಂಸ್ಥಾಪಕರು ಮತ್ತು ಮುಖ್ಯಸ್ಥರಾದ ಶ್ರೀ ಗಿರೀಶ್ ನಾಯರ್, ಸಹ-ಸಂಸ್ಥಾಪಕ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಅಂಕೀತ್ ದೇವ್, ಮಾಹೆ ಮಣಿಪಾಲದ ಉಪಕುಲಪತಿಗಳಾದ ಲೆಫ್ಟಿನೆಂಟ್ ಜನರಲ್ (ಡಾ) ಎಂ ಡಿ ವೆಂಕಟೇಶ್ ಗೌರವ ಅತಿಥಿಅತಿಥಿಗಳಾಗಿದ್ದರು. ಮಾಹೆ ಮಣಿಪಾಲದ ಸಹ ಕುಲಾಧಿಪತಿ ಡಾ.ಎಚ್.ಎಸ್.ಬಲ್ಲಾಳ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.




ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರವು ಎನರ್ಜಿ ಸೆಲ್ ಎದುರು, ಬಿಕ್ಕೂ ರಸ್ತೆ ಬಳಿ, ಮಾಧವನಗರ, ಮಣಿಪಾಲ ಇಲ್ಲಿ ಕಾರ್ಯಾಚರಿಸಲಿದೆ. ಆಕ್ಸೆಸ್ ಲೈಫ್ ಅಸಿಸ್ಟೆನ್ಸ್ ಫೌಂಡೇಶನ್, ಭಾರತದ ಲಾಭರಹಿತ (ಎನ್ ಜಿ ಓ) ನೋಂದಾಯಿತ ಸಂಸ್ಥೆಯಾಗಿದ್ದು , ತಮ್ಮ ಮಗುವಿನ ಕ್ಯಾನ್ಸರ್ ಚಿಕಿತ್ಸೆಗಾಗಿ ಕ್ಯಾನ್ಸರ್ ಕೇಂದ್ರಕ್ಕೆ ಬರುವ ಕುಟುಂಬಗಳಿಗೆ ಬಹುಸೌಲಭ್ಯ ಮತ್ತು ಬೆಂಬಲದ ಆರೈಕೆಯನ್ನು ಒದಗಿಸುತ್ತದೆ. 3 ರಿಂದ 6 ತಿಂಗಳ ಅವಧಿಯವರೆಗೆ ಮತ್ತು ಕೆಲವೊಮ್ಮೆ ಒಂದು ವರ್ಷದ ಅವಧಿಯ ಚಿಕಿತ್ಸೆಯ ಸಂಪೂರ್ಣ ಅವಧಿಯಲ್ಲಿ ಮಕ್ಕಳು ಮತ್ತು ಅವರ ಪೋಷಕರಿಗೆ ವಸತಿ, ನೈರ್ಮಲ್ಯದ ವಾತಾವರಣ, ಪೌಷ್ಟಿಕಾಂಶವುಳ್ಳ ಊಟ, ಸಮಾಲೋಚನೆ, ಮನರಂಜನಾ ಮತ್ತು ಶೈಕ್ಷಣಿಕ ಸಹಾಯ ಸೌಲಭ್ಯವನ್ನು ಒದಗಿಸುತ್ತದೆ.

ಮಣಿಪಾಲ್ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ (MEMG) ಮುಖ್ಯಸ್ಥ ಡಾ ರಂಜನ್ ಆರ್ ಪೈ ಮಾತನಾಡಿ, " ಮಣಿಪಾಲದ ಈ ಕೇಂದ್ರವು ಕರ್ನಾಟಕದ ಮೊದಲ ಕ್ಯಾನ್ಸರ್ ಪೀಡಿತ ಮಕ್ಕಳು ಮತ್ತು ಅವರ ಆರೈಕೆದಾರರಿಗಾಗಿ ಹೋಮ್ ಅವೇ ಫ್ರಮ್ ಹೋಮ್ ಪರಿಕಲ್ಪನೆಯಾಗಿದೆ. ಇದು ಮಕ್ಕಳಿಗೆ ಮತ್ತು ಅವರ ಆರೈಕೆ ಮಾಡುವವರಿಗೆ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಚಿಕಿತ್ಸೆಯು ನಡೆಯುತ್ತಿರುವಾಗ ಸಮಗ್ರ ಆರೈಕೆಯನ್ನು ಒದಗಿಸುತ್ತದೆ. ಈ ಪ್ರದೇಶದ ಬಹಳಷ್ಟು ಸ್ವಯಂಸೇವಕರಿಗೆ ಈ ಸೇವೆಯಲ್ಲಿ ತಾವು ತೊಡಗಿಸಿಕೊಳ್ಳಲು ಕೇಂದ್ರವು ದಾರಿಯನ್ನು ಒದಗಿಸಲಿದೆ" ಎಂದರು.

ಆಕ್ಸೆಸ್‌ಲೈಫ್ ಇದರ ಸಹ -ಸಂಸ್ಥಾಪಕ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಅಂಕೀತ್ ದೇವ್ ಅವರು , "ಮಾಹೆ ಸಹಯೋಗದೊಂದಿಗೆ ಮಣಿಪಾಲದಲ್ಲಿ ನಮ್ಮ ಹೊಸ ಕೇಂದ್ರವನ್ನು ಪ್ರಾರಂಭಿಸಲು ನಾವು ತುಂಬಾ ಸಂತೋಷಪಡುತ್ತೇವೆ. ಕೇಂದ್ರದ ಮೂಲಕ ನಾವು ಎಲ್ಲಾ ಚಿಕಿತ್ಸೆ ನೀಡುವ ವೈದ್ಯರು, ಅರೆವೈದ್ಯಕೀಯ ತಂಡ ಮತ್ತು ಕುಟುಂಬಗಳನ್ನು ಬೆಂಬಲಿಸಲು ಸಾಧ್ಯವಾಗುವುದಲ್ಲದೆ, ಕರ್ನಾಟಕದಲ್ಲಿ ಮಣಿಪಾಲದಲ್ಲಿ ನಮ್ಮ ವಿಸ್ತರಣೆಯು ಬಾಲ್ಯದ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲು ನಮಗೆ ಅನುವು ಮಾಡಿಕೊಡುತ್ತದೆ" ಎಂದು ಅಭಿಪ್ರಾಯ ಪಟ್ಟರು.
ಮಾಹೆ ಮಣಿಪಾಲದ ಉಪಕುಲಪತಿಗಳಾದ ಲೆಫ್ಟಿನೆಂಟ್ ಜನರಲ್ (ಡಾ) ಎಂ ಡಿ ವೆಂಕಟೇಶ್ ಅವರು ಈ ನಿಟ್ಟಿನಲ್ಲಿ ಕೆಲಸ ಮಾಡಿದ ತಂಡವನ್ನು ಅಭಿನಂದಿಸಿದರು ಮತ್ತು "ಮಾಹೆ, ಈ ಪ್ರತಿಷ್ಠಾನದೊಂದಿಗೆ ಮಣಿಪಾಲದಲ್ಲಿ ಈ ಕೇಂದ್ರದ ಆರಂಭಕ್ಕೆ ಬಹಳವಾಗಿ ಪ್ರಯತ್ನಿಸಿ ಒಪ್ಪಂದವನ್ನು (MoU) ಮಾಡಿಕೊಂಡಿದ್ದೇವೆ. ಏಕೆಂದರೆ ಕಸ್ತೂರ್ಬಾ ಆಸ್ಪತ್ರೆಯ ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕೊಲೊಜಿ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳಲ್ಲಿ 2/3 ಕ್ಕಿಂತ ಹೆಚ್ಚು ಮಕ್ಕಳು ಕರ್ನಾಟಕದ ಗ್ರಾಮೀಣಪ್ರದೇಶದಿಂದ ಬರುತ್ತಿದ್ದಾರೆ. ಕೇಂದ್ರಕ್ಕಾಗಿ ಮಾಹೆಯು ಆಸ್ಪತ್ರೆಯ ಸಮೀಪದಲ್ಲಿ ಎರಡು ವಸತಿ ಗೃಹಗಳನ್ನು ಒದಗಿಸಿದೆ. ಆಕ್ಸೆಸ್ ಲೈಫ್ ಅಸಿಸ್ಟೆನ್ಸ್ ಫೌಂಡೇಶನ್ ಅದನ್ನು ನವೀಕರಿಸಿದೆ ಮತ್ತು ಯಾವುದೇ ಸಮಯದಲ್ಲಿ 12 ಕುಟುಂಬಗಳಿಗೆ ಆತಿಥ್ಯ ನೀಡಬಹುದಾದ ನೈರ್ಮಲ್ಯಯುಕ್ತ ವಸತಿಗೃಹವನ್ನಾಗಿ ಮಾರ್ಪಾಟು ಮಾಡಿದೆ" ಎಂದರು.
ಮಾಹೆ ಸಹ ಕುಲಾಧಿಪತಿಗಳಾದ ಡಾ.ಎಚ್.ಎಸ್. ಬಲ್ಲಾಳ್ ಮಾತನಾಡಿ, "ಬಾಲ್ಯದ ಕ್ಯಾನ್ಸರ್ ಗುಣಪಡಿಸಬಹುದಾಗಿದೆ. ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರವು ಈ ಸೌಲಭ್ಯಗಳನ್ನು ಒದಗಿಸುವ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿಂದ ಆರೈಕೆ ಮಾಡುವವರು ಚಿಕಿತ್ಸೆಯನ್ನು ತ್ಯಜಿಸುವುದು ಮತ್ತು ನಿರಾಕರಿಸುವವರ ಮನ ಪರಿವರ್ತನೆ ಗುರಿಯನ್ನು ಹೊಂದಿದೆ. ಇದರೊಂದಿಗೆ ಆಸ್ಪತ್ರೆಯು ಈ ಮಕ್ಕಳಿಗೆ ವಿವಿಧ ನಿಧಿಗಳು ಮತ್ತು ಯೋಜನೆಗಳ ಮೂಲಕ ಚಿಕಿತ್ಸೆಗೆ ಸಹಾಯ ಮಾಡುವುದನ್ನು ಮುಂದುವರೆಸಲಿದೆ. ಈ ಎಲ್ಲಾ ಸೌಲಭ್ಯಗಳು ರೋಗಿಗೆ ಯಾವುದೇ ಹೆಚ್ಚುವರಿ ವೆಚ್ಚವಿಲ್ಲದೆ ಸಿಗಲಿದೆ ಮತ್ತು ಕೇಂದ್ರದ ಕಾರ್ಯಾಚರಣೆಯ ವೆಚ್ಚದ ಹೆಚ್ಚು ಭಾಗ ಆಕ್ಸೆಸ್ ಲೈಫ್ ಅಸಿಸ್ಟೆನ್ಸ್ ಫೌಂಡೇಶನ್ ಭರಿಸಲಿದೆ" ಎಂದರು.

**Daijiworld.com**

# Udupi: AccessLife MAHE, Manipal Centre inaugurated

Sat, Apr 30 2022 06:36:41 PM

*Media Release*

**Manipal, Apr 30:** Kasturba Medical College, Manipal and Kasturba Hospital, MAHE Manipal in association with Department of Pediatric Hematology and Oncology inaugurated AccessLife MAHE, Manipal Centre (Home away from Home" for children with cancer and their caregivers) on Saturday April 30.

Which provides Free Accommodation, Nutrition, Counselling and Education support services to children with cancer and their caregivers.

This is joint venture of Kasturba Medical College and Hospital, MAHE Manipal and Accesslife.






Chief guest Dr Ranjan R Pai, chairman, Manipal Education and Medical Group (MEMG) inaugurated the center.

Girish Nair, founder and chairman, Ankeet Dave, co-founder and executive director, AccessLife Assistance Foundation, Lt Gen (Dr) M D Venkatesh, vice chancellor, MAHE, Manipal were the guests of honour of the programme. Dr H S Ballal, pro chancellor, MAHE Manipal was presided over the programme.

AccessLife MAHE, Manipal Centre located at opposite Energy Cell, near BQ road, Madhavanagar, Manipal. Access Life Assistance Foundation, India is a Non-profit organization registered company, providing multi-disciplinary supportive care to families who come to cancer center for their child's cancer treatment. They offer accommodation, hygienic environment, nutritional meals, counselling, recreational and educational support, both for the children and their parents during the entire duration of treatment which goes to the duration of 3-6 months and sometimes even a year.

Dr Ranjan R Pai, chairman, Manipal Education and Medical Group (MEMG) said, "The centre is one-of-its-kind and is the first 'home away from home' concept in Karnataka which provides holistic care to children and their caregivers belonging to lower socio-economic strata while the cancer treatment is ongoing in the hospital. The centre also provides avenue for lot of volunteers from this region to step up and engage themselves with these children and families to make their journey through cancer treatment more pleasant."

Ankeet Dave, co-founder and executive director said, "We are extremely delighted to start our new centre in Manipal in association with MAHE. We are pleased that we will not only be able to support all the treating doctors, paramedical team and families but our extension to Manipal, Karnataka will also allow us to spread awareness on childhood cancer."

Lt Gen (Dr) M D Venkatesh, vice chancellor congratulated the team work and said, "MAHE formed a Memorandum of Understanding (MoU) with this foundation as more than 2/3rd of children with cancer taking treatment in the Division of Pediatric Hematology and Oncology of Kasturba Hospital were coming from rural interiors of Karnataka. MAHE provided two residential quarters close to the hospital and Access Life Assistance Foundation renovated it and made it into a hygienic accommodation which can host 12 families at any given time."

Dr H S Ballal, pro-chancellor said, "Childhood cancers being curable, the centre aims at reducing treatment abandonment and refusal by the caregivers due to financial and social reasons by providing these facilities which reduce the out-of-pocket expenditure during cancer treatment while the hospital continues to help these children with treatment through various funds and schemes."

All these facilities come at no extra cost to the patient and the operational cost for the centre would be borne largely by the Access Life Assistance Foundation.

UDUPI BULLETIN

# ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರದ ಉದ್ಘಾಟನೆ

By Udupi Bulletin News Desk - May 1, 2022 0




**ಮಣಿಪಾಲ:** ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮಣಿಪಾಲ ಮತ್ತು ಕಸ್ತೂರ್ಬಾ ಆಸ್ಪತ್ರೆ ಮಾಹೆ ಮಣಿಪಾಲದ ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕೊಲಾಜಿ ವಿಭಾಗದ ಸಹಯೋಗದೊಂದಿಗೆ ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರದ (ಕ್ಯಾನ್ಸರ್ ಪೀಡಿತ ಮಕ್ಕಳು ಮತ್ತು ಅವರ ಆರೈಕೆದಾರರಿಗಾಗಿ ಹೋಮ್ ಆವೇ ಫ್ರಮ್ ಹೋಮ್) ಉದ್ಘಾಟನಾ ಸಮಾರಂಭ ನಡೆಯಿತು.

ಇದು ಕ್ಯಾನ್ಸರ್ ಇರುವ ಮಕ್ಕಳಿಗೆ ಮತ್ತು ಅವರ ಆರೈಕೆ ಮಾಡುವವರಿಗೆ ಉಚಿತವಾಗಿ ವಸತಿ, ಪೌಷ್ಟಿಕ ಆಹಾರ, ಸಮಾಲೋಚನೆ ಮತ್ತು ಶೈಕ್ಷಣಿಕ ಸಹಾಯ ಸೇವೆಗಳನ್ನು ಒದಗಿಸುತ್ತದೆ. ಇದು ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಮಾಹೆ ಮಣಿಪಾಲ ಮತ್ತು ಆಕ್ಸೆಸ್‌ಲೈಫ್‌ನ ಜಂಟಿ ಯೋಜನೆಯಾಗಿದೆ.

ಮಣಿಪಾಲ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ (ಎಂ ಈ ಎಂ ಜಿ) ಮುಖ್ಯಸ್ಥರಾದ ಡಾ.ರಂಜನ್ ಆರ್ ಪೈ ಕೇಂದ್ರವನ್ನು ಉದ್ಘಾಟಿಸಿದರು. ಆಕ್ಸೆಸ್‌ಲೈಫ್ ಇದರ ಸಂಸ್ಥಾಪಕರು ಮತ್ತು ಮುಖ್ಯಸ್ಥರಾದ ಗಿರೀಶ್ ನಾಯರ್, ಸಹ-ಸಂಸ್ಥಾಪಕ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರಾದ ಅಂಕೀತ್ ದೇವ್, ಮಾಹೆ ಮಣಿಪಾಲದ ಉಪಕುಲಪತಿಗಳಾದ ಲೆಫ್ಟಿನೆಂಟ್ ಜನರಲ್ (ಡಾ) ಎಂ ಡಿ ವೆಂಕಟೇಶ್ ಗೌರವ ಅತಿಥಿಗಳಾಗಿದ್ದರು. ಮಾಹೆ ಮಣಿಪಾಲದ ಸಹ ಕುಲಾಧಿಪತಿ ಡಾ.ಎಚ್.ಎಸ್.ಬಲ್ಲಾಳ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರವು ಎನರ್ಜಿ ಸೆಲ್ ಎದುರು, ಬಿಕ್ಕೂ ರಸ್ತೆ ಬಳಿ, ಮಾಧವನಗರ, ಮಣಿಪಾಲ ಇಲ್ಲಿ ಕಾರ್ಯಾಚರಿಸಲಿದೆ. ಆಕ್ಸೆಸ್ ಲೈಫ್ ಅಸಿಸ್ಟೆನ್ಸ್ ಫೌಂಡೇಶನ್, ಭಾರತದ ಲಾಭರಹಿತ (ಎನ್ ಜಿ ಓ) ನೋಂದಾಯಿತ ಸಂಸ್ಥೆಯಾಗಿದ್ದು, ತಮ್ಮ ಮಗುವಿನ ಕ್ಯಾನ್ಸರ್ ಚಿಕಿತ್ಸೆಗಾಗಿ ಕ್ಯಾನ್ಸರ್ ಕೇಂದ್ರಕ್ಕೆ ಬರುವ ಕುಟುಂಬಗಳಿಗೆ ಬಹುಸೌಲಭ್ಯ ಮತ್ತು ಬೆಂಬಲದ ಆರೈಕೆಯನ್ನು ಒದಗಿಸುತ್ತದೆ.

3 ರಿಂದ 6 ತಿಂಗಳ ಅವಧಿಯವರೆಗೆ ಮತ್ತು ಕೆಲವೊಮ್ಮೆ ಒಂದು ವರ್ಷದ ಅವಧಿಯ ಚಿಕಿತ್ಸೆಯ ಸಂಪೂರ್ಣ ಅವಧಿಯಲ್ಲಿ ಮಕ್ಕಳು ಮತ್ತು ಅವರ ಪೋಷಕರಿಗೆ ವಸತಿ, ನೈರ್ಮಲ್ಯದ ವಾತಾವರಣ, ಪೌಷ್ಟಿಕಾಂಶವುಳ್ಳ ಊಟ, ಸಮಾಲೋಚನೆ, ಮನರಂಜನಾ ಮತ್ತು ಶೈಕ್ಷಣಿಕ ಸಹಾಯ ಸೌಲಭ್ಯವನ್ನು ಒದಗಿಸುತ್ತದೆ.

ಮಣಿಪಾಲ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ (MEMG) ಮುಖ್ಯಸ್ಥ ಡಾ. ರಂಜನ್ ಆರ್ ಪೈ ಮಾತನಾಡಿ, ಮಣಿಪಾಲದ ಈ ಕೇಂದ್ರವು ಕರ್ನಾಟಕದ ಮೊದಲ ಕ್ಯಾನ್ಸರ್ ಪೀಡಿತ ಮಕ್ಕಳು ಮತ್ತು ಅವರ ಆರೈಕೆದಾರರಿಗಾಗಿ ಹೋಮ್ ಅವೇ ಫ್ರಮ್ ಹೋಮ್ ಪರಿಕಲ್ಪನೆಯಾಗಿದೆ. ಇದು ಮಕ್ಕಳಿಗೆ ಮತ್ತು ಅವರ ಆರೈಕೆ ಮಾಡುವವರಿಗೆ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಚಿಕಿತ್ಸೆಯು ನಡೆಯುತ್ತಿರುವಾಗ ಸಮಗ್ರ ಆರೈಕೆಯನ್ನು ಒದಗಿಸುತ್ತದೆ. ಈ ಪ್ರದೇಶದ ಬಹಳಷ್ಟು ಸ್ವಯಂಸೇವಕರಿಗೆ ಈ ಸೇವೆಯಲ್ಲಿ ತಾವು ತೊಡಗಿಸಿಕೊಳ್ಳಲು ಕೇಂದ್ರವು ದಾರಿಯನ್ನು ಒದಗಿಸಲಿದೆ ಎಂದರು.

ಆಕ್ಸೆಸ್‌ಲೈಫ್ ಇದರ ಸಹ -ಸಂಸ್ಥಾಪಕ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರಾದ ಅಂಕೀತ್ ದೇವ್ ಅವರು ಮಾತನಾಡಿ, ಮಾಹೆ ಸಹಯೋಗದೊಂದಿಗೆ ಮಣಿಪಾಲದಲ್ಲಿ ನಮ್ಮ ಹೊಸ ಕೇಂದ್ರವನ್ನು ಪ್ರಾರಂಭಿಸಲು ನಾವು ತುಂಬಾ ಸಂತೋಷಪಡುತ್ತೇವೆ. ಕೇಂದ್ರದ ಮೂಲಕ ನಾವು ಎಲ್ಲಾ ಚಿಕಿತ್ಸೆ ನೀಡುವ ವೈದ್ಯರು, ಅರೆವೈದ್ಯಕೀಯ ತಂಡ ಮತ್ತು ಕುಟುಂಬಗಳನ್ನು ಬೆಂಬಲಿಸಲು ಸಾಧ್ಯವಾಗುವುದಲ್ಲದೆ, ಕರ್ನಾಟಕದಲ್ಲಿ ಮಣಿಪಾಲದಲ್ಲಿ ನಮ್ಮ ವಿಸ್ತರಣೆಯು ಬಾಲ್ಯದ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲು ನಮಗೆ ಅನುವು ಮಾಡಿಕೊಡುತ್ತದೆ ಎಂದು ಅಭಿಪ್ರಾಯಪಟ್ಟರು.

ಮಾಹೆ ಮಣಿಪಾಲದ ಉಪಕುಲಪತಿಗಳಾದ ಲೆಫ್ಟಿನೆಂಟ್ ಜನರಲ್ (ಡಾ) ಎಂ ಡಿ ವೆಂಕಟೇಶ್ ಮಾತನಾಡಿ, ಈ ನಿಟ್ಟಿನಲ್ಲಿ ಕೆಲಸ ಮಾಡಿದ ತಂಡವನ್ನು ಅಭಿನಂದಿಸಿದರು ಮತ್ತು ಮಾಹೆ ಈ ಪ್ರತಿಷ್ಠಾನದೊಂದಿಗೆ ಮಣಿಪಾಲದಲ್ಲಿ ಈ ಕೇಂದ್ರದ ಆರಂಭಕ್ಕೆ ಬಹಳವಾಗಿ ಪ್ರಯತ್ನಿಸಿ ಒಪ್ಪಂದವನ್ನು ಮಾಡಿಕೊಂಡಿದ್ದೇವೆ. ಏಕೆಂದರೆ ಕಸ್ತೂರ್ಬಾ ಆಸ್ಪತ್ರೆಯ ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕೊಲೊಜಿ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳಲ್ಲಿ 2/3 ಕ್ಕಿಂತ ಹೆಚ್ಚು ಮಕ್ಕಳು ಕರ್ನಾಟಕದ ಗ್ರಾಮೀಣ ಪ್ರದೇಶದಿಂದ ಬರುತ್ತಿದ್ದಾರೆ.

ಕೇಂದ್ರಕ್ಕಾಗಿ ಮಾಹೆಯು ಆಸ್ಪತ್ರೆಯ ಸಮೀಪದಲ್ಲಿ ಎರಡು ವಸತಿ ಗೃಹಗಳನ್ನು ಒದಗಿಸಿದೆ. ಆಕ್ಸೆಸ್ ಲೈಫ್ ಅಸಿಸ್ಟೆನ್ಸ್ ಫೌಂಡೇಶನ್ ಅದನ್ನು ನವೀಕರಿಸಿದೆ ಮತ್ತು ಯಾವುದೇ ಸಮಯದಲ್ಲಿ 12 ಕುಟುಂಬಗಳಿಗೆ ಆತಿಥ್ಯ ನೀಡಬಹುದಾದ ನೈರ್ಮಲ್ಯಯುಕ್ತ ವಸತಿಗೃಹವನ್ನಾಗಿ ಮಾರ್ಪಾಡು ಮಾಡಿದೆ ಎಂದರು.

ಮಾಹೆ ಸಹ ಕುಲಾಧಿಪತಿಗಳಾದ ಡಾ.ಎಚ್.ಎಸ್. ಬಲ್ಲಾಳ್ ಮಾತನಾಡಿ, ಬಾಲ್ಯದ ಕ್ಯಾನ್ಸರ್ ಗುಣಪಡಿಸಬಹುದಾಗಿದೆ. ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರವು ಈ ಸೌಲಭ್ಯಗಳನ್ನು ಒದಗಿಸುವ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿಂದ ಆರೈಕೆ ಮಾಡುವವರು ಚಿಕಿತ್ಸೆಯನ್ನು ತ್ಯಜಿಸುವುದು ಮತ್ತು ನಿರಾಕರಿಸುವವರ ಮನ ಪರಿವರ್ತನೆ ಗುರಿಯನ್ನು ಹೊಂದಿದೆ.

ಇದರೊಂದಿಗೆ ಆಸ್ಪತ್ರೆಯು ಈ ಮಕ್ಕಳಿಗೆ ವಿವಿಧ ನಿಧಿಗಳು ಮತ್ತು ಯೋಜನೆಗಳ ಮೂಲಕ ಚಿಕಿತ್ಸೆಗೆ ಸಹಾಯ ಮಾಡುವುದನ್ನು ಮುಂದುವರೆಸಲಿದೆ. ಈ ಎಲ್ಲಾ ಸೌಲಭ್ಯಗಳು ರೋಗಿಗೆ ಯಾವುದೇ ಹೆಚ್ಚುವರಿ ವೆಚ್ಚವಿಲ್ಲದೆ ಸಿಗಲಿದೆ ಮತ್ತು ಕೇಂದ್ರದ ಕಾರ್ಯಾಚರಣೆಯ ವೆಚ್ಚದ ಹೆಚ್ಚು ಭಾಗ ಆಕ್ಸೆಸ್ ಲೈಫ್ ಅಸಿಸ್ಟೆನ್ಸ್ ಫೌಂಡೇಶನ್ ಭರಿಸಲಿದೆ ಎಂದರು.

KARAVALI XPRESS.COM
ವಿಶ್ವಾಸದ ನಡೆ

# ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರದ ಉದ್ಘಾಟನೆ

By Janardhan Kodavoor/Team karavalixpress, May 1, 2022



ಮಣಿಪಾಲ, 30ನೇ ಏಪ್ರಿಲ್ 2022: ಕಸ್ತೂರ್ಬಾ ವೈದ್ಯಕೀಯ ಕಾಲೇಜು, ಮಣಿಪಾಲ ಮತ್ತು ಕಸ್ತೂರ್ಬಾ ಆಸ್ಪತ್ರೆ, ಮಾಹೆ ಮಣಿಪಾಲದ ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕೊಲಾಜಿ ವಿಭಾಗದ ಸಹಯೋಗದೊಂದಿಗೆ ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರವನ್ನು (ಕ್ಯಾನ್ಸರ್ ಪೀಡಿತ ಮಕ್ಕಳು ಮತ್ತು ಅವರ ಆರೈಕೆದಾರರಿಗಾಗಿ ಹೋಮ್ ಅವೇ ಫ್ರಮ್ ಹೋಮ್) ಇಂದು ಉದ್ಘಾಟಿಸಲಾಯಿತು. ಇದು ಕ್ಯಾನ್ಸರ್ ಇರುವ ಮಕ್ಕಳಿಗೆ ಮತ್ತು ಅವರ ಆರೈಕೆ ಮಾಡುವವರಿಗೆ ಉಚಿತವಾಗಿ ವಸತಿ, ಪೌಷ್ಟಿಕ ಆಹಾರ, ಸಮಾಲೋಚನೆ ಮತ್ತು ಶೈಕ್ಷಣಿಕ ಸಹಾಯ ಸೇವೆಗಳನ್ನು ಒದಗಿಸುತ್ತದೆ. ಇದು ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಮಾಹೆ ಮಣಿಪಾಲ ಮತ್ತು ಆಕ್ಸೆಸ್‌ಲೈಫ್‌ನ ಜಂಟಿ ಯೋಜನೆಯಾಗಿದೆ. ಮಣಿಪಾಲ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ (ಎಂ ಈ ಎಂ ಜಿ) ಮುಖ್ಯಸ್ಥರಾದ ಡಾ.ರಂಜನ್ ಆರ್ ಪೈ ಕೇಂದ್ರವನ್ನು ಉದ್ಘಾಟಿಸಿದರು. ಆಕ್ಸೆಸ್‌ಲೈಫ್ ಇದರ ಸಂಸ್ಥಾಪಕರು ಮತ್ತು ಮುಖ್ಯಸ್ಥರಾದ ಶ್ರೀ ಗಿರೀಶ್ ನಾಯರ್, ಸಹ-ಸಂಸ್ಥಾಪಕ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಅಂಕೀತ್ ದೇವ್, ಮಾಹೆ ಮಣಿಪಾಲದ ಉಪಕುಲಪತಿಗಳಾದ ಲೆಫ್ಟಿನೆಂಟ್ ಜನರಲ್ (ಡಾ) ಎಂ ಡಿ ವೆಂಕಟೇಶ್ ಗೌರವ ಅತಿಥಿಅತಿಥಿಗಳಾಗಿದ್ದರು. ಮಾಹೆ ಮಣಿಪಾಲದ ಸಹ ಕುಲಾಧಿಪತಿ ಡಾ.ಎಚ್.ಎಸ್.ಬಲ್ಲಾಳ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರವು ಎನರ್ಜಿ ಸೆಲ್ ಎದುರು, ಬಿಕ್ಕೂ ರಸ್ತೆ ಬಳಿ, ಮಾಧವನಗರ, ಮಣಿಪಾಲ ಇಲ್ಲಿ ಕಾರ್ಯಾಚರಿಸಲಿದೆ. ಆಕ್ಸೆಸ್ ಲೈಫ್ ಅಸಿಸ್ಟೆನ್ಸ್ ಫೌಂಡೇಶನ್, ಭಾರತದ ಲಾಭರಹಿತ (ಎನ್ ಜಿ ಓ) ನೋಂದಾಯಿತ ಸಂಸ್ಥೆಯಾಗಿದ್ದು , ತಮ್ಮ ಮಗುವಿನ ಕ್ಯಾನ್ಸರ್ ಚಿಕಿತ್ಸೆಗಾಗಿ ಕ್ಯಾನ್ಸರ್ ಕೇಂದ್ರಕ್ಕೆ ಬರುವ ಕುಟುಂಬಗಳಿಗೆ ಬಹುಸೌಲಭ್ಯ ಮತ್ತು ಬೆಂಬಲದ ಆರೈಕೆಯನ್ನು ಒದಗಿಸುತ್ತದೆ. 3 ರಿಂದ 6 ತಿಂಗಳ ಅವಧಿಯವರೆಗೆ ಮತ್ತು ಕೆಲವೊಮ್ಮೆ ಒಂದು ವರ್ಷದ ಅವಧಿಯ ಚಿಕಿತ್ಸೆಯ ಸಂಪೂರ್ಣ ಅವಧಿಯಲ್ಲಿ ಮಕ್ಕಳು ಮತ್ತು ಅವರ ಪೋಷಕರಿಗೆ ವಸತಿ, ನೈರ್ಮಲ್ಯದ ವಾತಾವರಣ, ಪೌಷ್ಟಿಕಾಂಶವುಳ್ಳ ಊಟ, ಸಮಾಲೋಚನೆ, ಮನರಂಜನಾ ಮತ್ತು ಶೈಕ್ಷಣಿಕ ಸಹಾಯ ಸೌಲಭ್ಯವನ್ನು ಒದಗಿಸುತ್ತದೆ.



ಮಣಿಪಾಲ್ ಶಿಕ್ಷಣ ಮತ್ತು ವೈದ್ಯಕೀಯ ಸಮೂಹದ (MEMG) ಮುಖ್ಯಸ್ಥ ಡಾ ರಂಜನ್ ಆರ್ ಪೈ ಮಾತನಾಡಿ, " ಮಣಿಪಾಲದ ಈ ಕೇಂದ್ರವು ಕರ್ನಾಟಕದ ಮೊದಲ ಕ್ಯಾನ್ಸರ್ ಪೀಡಿತ ಮಕ್ಕಳು ಮತ್ತು ಅವರ ಆರೈಕೆದಾರರಿಗಾಗಿ ಹೋಮ್ ಅವೇ ಫ್ರಮ್ ಹೋಮ್ ಪರಿಕಲ್ಪನೆಯಾಗಿದೆ. ಇದು ಮಕ್ಕಳಿಗೆ ಮತ್ತು ಅವರ ಆರೈಕೆ ಮಾಡುವವರಿಗೆ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಚಿಕಿತ್ಸೆಯು ನಡೆಯುತ್ತಿರುವಾಗ ಸಮಗ್ರ ಆರೈಕೆಯನ್ನು ಒದಗಿಸುತ್ತದೆ. ಈ ಪ್ರದೇಶದ ಬಹಳಷ್ಟು ಸ್ವಯಂಸೇವಕರಿಗೆ ಈ ಸೇವೆಯಲ್ಲಿ ತಾವು ತೊಡಗಿಸಿಕೊಳ್ಳಲು ಕೇಂದ್ರವು ದಾರಿಯನ್ನು ಒದಗಿಸಲಿದೆ" ಎಂದರು.

ಆಕ್ಸೆಸ್‌ಲೈಫ್ ಇದರ ಸಹ -ಸಂಸ್ಥಾಪಕ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಅಂಕೀತ್ ದೇವ್ ಅವರು , "ಮಾಹೆ ಸಹಯೋಗದೊಂದಿಗೆ ಮಣಿಪಾಲದಲ್ಲಿ ನಮ್ಮ ಹೊಸ ಕೇಂದ್ರವನ್ನು ಪ್ರಾರಂಭಿಸಲು ನಾವು ತುಂಬಾ ಸಂತೋಷಪಡುತ್ತೇವೆ. ಕೇಂದ್ರದ ಮೂಲಕ ನಾವು ಎಲ್ಲಾ ಚಿಕಿತ್ಸೆ ನೀಡುವ ವೈದ್ಯರು, ಅರೆವೈದ್ಯಕೀಯ ತಂಡ ಮತ್ತು ಕುಟುಂಬಗಳನ್ನು ಬೆಂಬಲಿಸಲು ಸಾಧ್ಯವಾಗುವುದಲ್ಲದೆ, ಕರ್ನಾಟಕದಲ್ಲಿ ಮಣಿಪಾಲದಲ್ಲಿ ನಮ್ಮ ವಿಸ್ತರಣೆಯು ಬಾಲ್ಯದ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲು ನಮಗೆ ಅನುವು ಮಾಡಿಕೊಡುತ್ತದೆ" ಎಂದು ಅಭಿಪ್ರಾಯ ಪಟ್ಟರು.

ಮಾಹೆ ಮಣಿಪಾಲದ ಉಪಕುಲಪತಿಗಳಾದ ಲೆಫ್ಟಿನೆಂಟ್ ಜನರಲ್ (ಡಾ) ಎಂ ಡಿ ವೆಂಕಟೇಶ್ ಅವರು ಈ ನಿಟ್ಟಿನಲ್ಲಿ ಕೆಲಸ ಮಾಡಿದ ತಂಡವನ್ನು ಅಭಿನಂದಿಸಿದರು ಮತ್ತು "ಮಾಹೆ, ಈ ಪ್ರತಿಷ್ಠಾನದೊಂದಿಗೆ ಮಣಿಪಾಲದಲ್ಲಿ ಈ ಕೇಂದ್ರದ ಆರಂಭಕ್ಕೆ ಬಹಳವಾಗಿ ಪ್ರಯತ್ನಿಸಿ ಒಪ್ಪಂದವನ್ನು (MoU) ಮಾಡಿಕೊಂಡಿದ್ದೇವೆ. ಏಕೆಂದರೆ ಕಸ್ತೂರ್ಬಾ ಆಸ್ಪತ್ರೆಯ ಮಕ್ಕಳ ರಕ್ತಶಾಸ್ತ್ರ ಮತ್ತು ಆಂಕೊಲೊಜಿ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳಲ್ಲಿ 2/3 ಕ್ಕಿಂತ ಹೆಚ್ಚು ಮಕ್ಕಳು ಕರ್ನಾಟಕದ ಗ್ರಾಮೀಣಪ್ರದೇಶದಿಂದ ಬರುತ್ತಿದ್ದಾರೆ. ಕೇಂದ್ರಕ್ಕಾಗಿ ಮಾಹೆಯು ಆಸ್ಪತ್ರೆಯ ಸಮೀಪದಲ್ಲಿ ಎರಡು ವಸತಿ ಗೃಹಗಳನ್ನು ಒದಗಿಸಿದೆ. ಆಕ್ಸೆಸ್ ಲೈಫ್ ಅಸಿಸ್ಟೆನ್ಸ್ ಫೌಂಡೇಶನ್ ಅದನ್ನು ನವೀಕರಿಸಿದೆ ಮತ್ತು ಯಾವುದೇ ಸಮಯದಲ್ಲಿ 12 ಕುಟುಂಬಗಳಿಗೆ ಆತಿಥ್ಯ ನೀಡಬಹುದಾದ ನೈರ್ಮಲ್ಯಯುಕ್ತ ವಸತಿಗೃಹವನ್ನಾಗಿ ಮಾರ್ಪಾಟು ಮಾಡಿದೆ" ಎಂದರು.

ಮಾಹೆ ಸಹ ಕುಲಾಧಿಪತಿಗಳಾದ ಡಾ.ಎಚ್.ಎಸ್. ಬಲ್ಲಾಳ್ ಮಾತನಾಡಿ, "ಬಾಲ್ಯದ ಕ್ಯಾನ್ಸರ್ ಗುಣಪಡಿಸಬಹುದಾಗಿದೆ. ಆಕ್ಸೆಸ್‌ಲೈಫ್ ಮಾಹೆ ಮಣಿಪಾಲ ಕೇಂದ್ರವು ಈ ಸೌಲಭ್ಯಗಳನ್ನು ಒದಗಿಸುವ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿಂದ ಆರೈಕೆ ಮಾಡುವವರು ಚಿಕಿತ್ಸೆಯನ್ನು ತ್ಯಜಿಸುವುದು ಮತ್ತು ನಿರಾಕರಿಸುವವರ ಮನ ಪರಿವರ್ತನೆ ಗುರಿಯನ್ನು ಹೊಂದಿದೆ. ಇದರೊಂದಿಗೆ ಆಸ್ಪತ್ರೆಯು ಈ ಮಕ್ಕಳಿಗೆ ವಿವಿಧ ನಿಧಿಗಳು ಮತ್ತು ಯೋಜನೆಗಳ ಮೂಲಕ ಚಿಕಿತ್ಸೆಗೆ ಸಹಾಯ ಮಾಡುವುದನ್ನು ಮುಂದುವರೆಸಲಿದೆ. ಈ ಎಲ್ಲಾ ಸೌಲಭ್ಯಗಳು ರೋಗಿಗೆ ಯಾವುದೇ ಹೆಚ್ಚುವರಿ ವೆಚ್ಚವಿಲ್ಲದೆ ಸಿಗಲಿದೆ ಮತ್ತು ಕೇಂದ್ರದ ಕಾರ್ಯಾಚರಣೆಯ ವೆಚ್ಚದ ಹೆಚ್ಚು ಭಾಗ ಆಕ್ಸೆಸ್ ಲೈಫ್ ಅಸಿಸ್ಟೆನ್ಸ್ ಫೌಂಡೇಶನ್ ಭರಿಸಲಿದೆ" ಎಂದರು.

**Other Links:**

- **Public Next**: https://publicnext.com/article/nid/Udupi/Health-and-Fitness/node=645174
- **Udupixpress**: https://udupixpress.com/inauguration-of-access-life-mahe-manipal-centerhome-away-from-home/